
ಮತಿಘಟ್ಟ ಕೃಷ್ಣಮೂರ್ತಿ

ವ್ಯಕ್ತಿ ಪರಿಚಯ



ಡಾ. ಹಂಪನಹಳ್ಳಿ ತಿಮ್ಮೇಗೌಡ

MATHIGHATTA KRISHNAMURTHY - A pen portrait
- by DR. HAMPANAHALLI THIMME GOWDA,
Published by : KARNATAKA JANAPADA PARISHATH.
No.1, Karnataka Government Employee's Residential Layout,
Near M.S. Ramaiah Hospital Gate, New B.E.L. Road,
Bangalore - 560.054. Pages : 32 Price : Rs.10 2008

ಪ್ರಥಮ ಮುದ್ರಣ ೨೦೦೮

ಪ್ರತಿಗಳು ೨೦೦೦

ಪುಟಗಳು ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕ ನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ. ಹಂಪನಹಳ್ಳಿ ತಿಮ್ಮೇಗೌಡ ಅವರು ಮತಿಘಟ್ಟ ಕೃಷ್ಣಮೂರ್ತಿ** ಯವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಲಹಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೨-೦೧-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಮೊದಲ ಮಾತು

ಆಧುನಿಕ ಜಗತ್ತಿನ ಜಾಗತೀಕರಣ ಭರಾಟೆಯಲ್ಲಿ ನಮ್ಮ ಮೂಲ ಪರಂಪರೆಗೆ, ದೇಶೀಯತೆಗೆ ಧಕ್ಕೆಯಾಗುತ್ತಿದೆಯೆಂಬುದು ಸಹಜ. ಆದರೆ ಅದಕ್ಕೆ ಆತಂಕಪಟ್ಟು ಹೆದರಿ ಕೂರುವ ಅಗತ್ಯವಿಲ್ಲ. ಭಾರತೀಯ ಸಂಸ್ಕೃತಿ ಗಟ್ಟಿಯಾದ ನೆಲೆಯಲ್ಲಿ ರೂಪುಗೊಂಡಿರುವಂತಹದ್ದು. ಎಷ್ಟೋ ಪರಸಂಸ್ಕೃತಿಗಳ ಆಕ್ರಮಣವನ್ನು ಸಹಿಸಿಕೊಂಡು ಬದುಕುವಂತಹ ಜೀವಂತಿಕೆ ಗುಣ, ಶಕ್ತಿ ಇದಕ್ಕಿದೆ. ಅಂತಹ ದೇಶೀ ಸಂಸ್ಕೃತಿಯ ತಳಪಾಯವೇ ಜಾನಪದ. ಜಾನಪದ ಸಂಸ್ಕೃತಿಯ ಉಳಿವು, ಬೆಳವಣಿಗೆಗಾಗಿ ವಿಭಿನ್ನ ನೆಲೆಯಲ್ಲಿ ನಿರಂತರವಾಗಿ ಕೆಲಸಮಾಡುವುದು ಅಗತ್ಯವಾಗಿದೆ.

ಕರ್ನಾಟಕದ ಜಾನಪದ ಕ್ಷೇತ್ರದಲ್ಲಿ ಹಿರಿಯರು, ಆರಂಭಿಕ ಸಂಗ್ರಹಕಾರರು, ಭಾರತೀಯ ಸಂಸ್ಕೃತಿಪರ ಚಿಂತಕರು ಆದ ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರ ವಿಷಯವನ್ನು ಕುರಿತು ಬರೆಯಲು ಜವಾಬ್ದಾರಿಯನ್ನು ನನಗೆ ವಹಿಸಿದ್ದಕ್ಕಾಗಿ, ಕರ್ನಾಟಕ ಜಾನಪದ ಪರಿಷತ್ತಿನ ಪದಾಧಿಕಾರಿಗಳಿಗೆ ನಾನು ಆಭಾರಿಯಾಗಿದ್ದೇನೆ.

ಡಾ. ಹಂಪನಹಳ್ಳಿ ತಿಮ್ಮೇಗೌಡ

ಮತಿಘಟ್ಟ ಕೃಷ್ಣಮೂರ್ತಿ

ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು ಕರ್ನಾಟಕದ ಹಿರಿಯ ಶ್ರೇಷ್ಠ ಜಾನಪದ ಸಂಗ್ರಹಕಾರರಲ್ಲಿ ಒಬ್ಬರು. ಜಾನಪದ ಸಂಗ್ರಹ, ಸಂಪಾದನೆ, ಪ್ರಚಾರವೇ ಇವರ ವೃತ್ತಿ. ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಇವುಗಳ ಬಗೆಗೆ ಅಪಾರ ಒಲವುಳ್ಳವರಾಗಿದ್ದು, ಜನಪದ ಸಾಹಿತ್ಯ ಸಂಗ್ರಹ, ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಆರೇಳು ದಶಕಗಳಿಗಿಂತಲೂ ಹೆಚ್ಚು ಕಾಲ ದುಡಿದವರು.

ಶ್ರೀಯುತರು 1912 ಜುಲೈ, 12ನೇ ತಾರೀಖು ಹಾಸನದಲ್ಲಿ ಮತಿಘಟ್ಟದ ಶ್ರೀಮತಿ ಚೆನ್ನಮ್ಮ ಮತ್ತು ಲಿಂಗಣ್ಣಯ್ಯನವರ 4ನೇ ಮಗನಾಗಿ ಜನಿಸಿದರು. ಇವರು ಮತಿಘಟ್ಟದಲ್ಲಿದ್ದ ಕೂಲಿಮಠದಲ್ಲಿ ಮರಳಿನ ಮೇಲೆ ಅಕ್ಷರತಿದ್ದುವುದರ ಮೂಲಕ ತಮ್ಮ ಶಿಕ್ಷಣವನ್ನು ಆರಂಭಿಸಿದರು. ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿಯಲ್ಲಿ ಪ್ರಾಥಮಿಕ ಶಾಲೆ ಅಭ್ಯಸಿಸಿದರು. ಬೇಲೂರಿನ ತಮ್ಮಯ್ಯನವರ ಛತ್ರದಲ್ಲಿ ಊಟ–ವಸತಿ ಪಡೆದು ಬೇಲೂರಿನಲ್ಲಿ ಮಾಧ್ಯಮಿಕ ಶಿಕ್ಷಣ ಗಳಿಸಿದರು. ಚಿಕ್ಕಮಗಳೂರಿನಲ್ಲಿ ವಾರಾನ್ನ ಊಟಮಾಡಿಕೊಂಡು ಪ್ರೌಢಶಿಕ್ಷಣವನ್ನು ಮುಗಿಸಿದರು. ನಂತರ ಬೆಂಗಳೂರಿನಲ್ಲಿ ಅಣ್ಣನವರಾದ ಎಲ್. ಗುಂಡಪ್ಪನವರ ಮನೆಯಲ್ಲಿದ್ದು ಇಂಟರ್ ಮೀಡಿಯೇಟ್ ಪಾಸು ಮಾಡಿದರು.

ಇಂಟರ್ ಮೀಡಿಯೇಟ್ (1931) ನಂತರ ಮಹಾತ್ಮ ಗಾಂಧೀಜಿಯವರ ಸ್ವದೇಶಿ ಚಳುವಳಿಯ ದೀವಿಗೆ ಹಿಡಿದು, ಸ್ವಾತಂತ್ರ್ಯ

ಹೋರಾಟಕ್ಕೆ ಧುಮುಕಿದರು. ಒಮ್ಮೆ ಬೇಲೂರಿನಲ್ಲಿ ಮಹಾತ್ಮ ಗಾಂಧೀಜಿಯವರ ದರ್ಶನವೂ ಆಯಿತು. ಆಗ ಮಿಲ್‌ಬಟ್ಟೆಯನ್ನು ಸುಟ್ಟು ಖಾದಿಬಟ್ಟೆ ಧರಿಸಲು ಪ್ರಾರಂಭಿಸಿದರು. ಶಿಕ್ಷಣವನ್ನು ಮೊಟಕುಗೊಳಿಸಿ ಸ್ವಂತ ಊರಾದ ಮತಿಘಟ್ಟಕ್ಕೆ ಆಗಮಿಸಿ ಅಣ್ಣ ಮುತ್ತು ರಾಮಸ್ವಾಮಿಯವರೊಂದಿಗೆ ವ್ಯವಸಾಯದಲ್ಲಿ ತೊಡಗಿದರು. ಜೊತೆಗೆ ಹಳ್ಳಿಗಳಲ್ಲಿ ವಯಸ್ಕರ ಶಿಕ್ಷಣ, ಖಾದಿಪ್ರಚಾರ ಪ್ರಾರಂಭಿಸಿದರು. ಜನಪದ ಸಾಹಿತ್ಯ ಸಂಗ್ರಹಕ್ಕೆ ಮೊದಲುಮಾಡಿದರು. ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾವು ಏರಿದಾಗ ಸಕ್ರಿಯವಾಗಿ ಪಾಲ್ಗೊಂಡು ಹೆಂಡದಂಗಡಿ, ಸಂತೆ ಪಿಕೆಟಿಂಗ್ ಇತ್ಯಾದಿ ಕಾರಣಕ್ಕಾಗಿ ಜೈಲುವಾಸ ಅನುಭವಿಸಿದರು. ವ್ಯವಸಾಯ ಮಾಡುತ್ತಿದ್ದಾಗ ಜನಪದ ಹಾಡುಗಳನ್ನು ಹೇಳುತ್ತಿದ್ದವರನ್ನೇ ಕೆಲಸಕ್ಕೆ ಆಳುಗಳಾಗಿ ಕರೆಯುತ್ತಿದ್ದರು.

ಜನಪದ ಸಾಹಿತ್ಯವನ್ನು ಸಂಗ್ರಹಿಸುವುದಕ್ಕೆ ಮತಿಘಟ್ಟ ಕೃಷ್ಣಮೂರ್ತಿಯವರಿಗೆ ಮೂಲ ಪ್ರೇರಣೆ ತಾಯಿ ಚನ್ನಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು. ಅಕ್ಕ ಹಾಗೂ ಊರಿನ ಹೆಣ್ಣುಮಕ್ಕಳು, ಗಂಡುಮಕ್ಕಳು ಹಾಡುತ್ತಿದ್ದ ಹಾಡುಗಳು, ಸುಗ್ಗಿಯ ಕಾಲದಲ್ಲಿ ಆಡುತ್ತಿದ್ದ ಕೋಲಾಟ, ಕೆಲಸಮಾಡುತ್ತಿದ್ದಾಗ ಹಾಡುತ್ತಿದ್ದ ಹಾಡುಗಳು, ಮದುವೆ ಮನೆಯಲ್ಲಿ ಹಾಡುತ್ತಿದ್ದ ಸೋಬಾನೆ ಹಾಡುಗಳು, ಜಾತ್ರೆಯಲ್ಲಿ ಹಾಡುತ್ತಿದ್ದ ದೇವರ ಹಾಡುಗಳು, ಲಾವಣಿಗಳು, ತಾಯಿಯ ಊರಿನವರಾದ ಕಳಸಾಪುರದ ಸುಬ್ಬಮ್ಮನವರು ಹಾಡುತ್ತಿದ್ದ ಹಾಡುಗಾರಿಕೆ ಇವೆಲ್ಲದರ ಪ್ರೇರಣೆಯಿಂದ ಜನಪದ ಸಾಹಿತ್ಯವನ್ನು ಸಂಗ್ರಹಸಿದರು. ಸಂಗ್ರಹಿಸಿದ ಗೀತೆಗಳನ್ನು ಮೊದಲಿಗೆ 'ಜಯಕರ್ನಾಟಕ', 'ಸರಸ್ವತಿ' ಪತ್ರಿಕೆಗಳಲ್ಲಿ ಪ್ರಕಟಿಸಿದರು.

ಇವರ ಅಣ್ಣನವರಾದ ಎಲ್. ಗುಂಡಪ್ಪನವರು ಕನ್ನಡ, ಸಂಸ್ಕೃತಿ, ಇಂಗ್ಲಿಷ್, ತಮಿಳು ಭಾಷೆಗಳಲ್ಲಿ ಪಂಡಿತರಾಗಿದ್ದು; ಸ್ವತಃ ಸಾಹಿತಿಗಳೂ, ಭಾಷಾಂತರಕಾರರೂ ಆಗಿದ್ದರು. ಇದರಿಂದ ಸಾಹಿತಿಗಳಾದ ಬಿ.ಎಂ.ಶ್ರೀ, ಮಾಸ್ತಿ, ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ ಮುಂತಾದವರ ಒಡನಾಟ ಇವರಿಗಾಯಿತು. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹಾಗೂ ದ.ರಾ. ಬೇಂದ್ರೆಯವರು ಚಿಕ್ಕಮಗಳೂರಿನ ಶಾಲೆಗೆ ಒಮ್ಮೆ ಬಂದಿದ್ದಾಗ, ಬೇಂದ್ರೆಯವರು 'ಗರತಿಯ ಹಾಡುಗಳು' ಸಂಗ್ರಹದ ಕರಡು ಪ್ರತಿಯನ್ನು ವಾಚಿಸಿದ್ದರು. ಈ ಎಲ್ಲ ಸ್ಫೂರ್ತಿ ಹಾಗು ಪ್ರಭಾವದಿಂದ ಜನಪದ ಸಾಹಿತ್ಯ ಸಂಗ್ರಹಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. 1960ನೇ ಇಸವಿಯಲ್ಲಿ ಬೀದರ್ ಜಿಲ್ಲೆಯನ್ನು ಹೊರತುಪಡಿಸಿ, ಕರ್ನಾಟಕದ ಉದ್ದಗಲಕ್ಕೂ ಎಲ್ಲಾ ಜಿಲ್ಲೆಗಳ ಮೂಲೆ ಮೂಲೆಗಳಿಗೆ ಭೇಟಿಕೊಟ್ಟು ಜನಪದ ಕಥೆ, ಬಿಡಿಗೀತೆಗಳು ಹಾಗು ಸಂಪ್ರದಾಯದ ಹಾಡುಗಳನ್ನು ಸಂಗ್ರಹಿಸಿದರು.

ಆರ್ಥಿಕ ಮುಗ್ಗಟ್ಟಿನಿಂದ ಹೊಟ್ಟೆಪಾಡಿಗಾಗಿ, ಮೊದಲಿಗೆ ಬೇಲೂರಿನಲ್ಲಿ 'ಮಯೂರ' ಪತ್ರಿಕೆಯನ್ನು ಪ್ರಾರಂಭಿಸಿದರು. 1935ರಲ್ಲಿ ಬೆಂಗಳೂರಿನಲ್ಲಿ ನೆಲೆಸಿ ಹಲವಾರು ಪತ್ರಿಕೆಗಳಲ್ಲಿ ದುಡಿದರು. ಆರು ತಿಂಗಳು ಪತ್ರಿಕೆಯಲ್ಲಿ ಕೆಲಸಮಾಡಿದರೆ ಉಳಿದ ಆರು ತಿಂಗಳು ಜನಪದ ಸಾಹಿತ್ಯದ ಸಂಗ್ರಹ. ಕೊನೆಗೆ ಪತ್ರಿಕೋದ್ಯಮದ ವೃತ್ತಿಯಿಂದ ನಿವೃತ್ತಿ ಹೊಂದಿದರು.

ಕರ್ನಾಟಕದಲ್ಲಿ ಆಕಾಶವಾಣಿ ಇಲ್ಲದ ಕಾಲದಲ್ಲಿ, ಇವರಿಗೆ ಮದ್ರಾಸ್ ಆಕಾಶವಾಣಿಯಿಂದ ಕಾರ್ಯಕ್ರಮಗಳನ್ನು ನಡೆಸಿಕೊಡಲು ಆಹ್ವಾನ ಬಂದಿತು. ಅಲ್ಲಿ ಪಿ. ಕಾಳಿಂಗರಾವ್, ಜಯವಂತಿದೇವಿ

ಮುಂತಾದ ಹಾಡುಗಾರರಿಗೆ ಜನಪದ ಹಾಡುಗಳನ್ನು ಮೂಲಧಾಟಿಯಲ್ಲಿ ಹೇಳಿಕೊಟ್ಟು 'ಬಾರಯ್ಯ ಬೆಳದಿಂಗಳೇ', 'ನಂಜುಂಡ', 'ಮೂಡಲ್ ಕುಣಿಗಲ್ ಕೆರೆ' ಇತ್ಯಾದಿ ಹಾಡುಗಳ ಪ್ರಸಾರದ ಮೂಲಕ ಆಕಾಶವಾಣಿಯಲ್ಲಿ ಜನಪದ ಕಾರ್ಯಕ್ರಮಕ್ಕೆ ಚಾಲನೆಮಾಡಿದರು. ಅನಂತರ ಬೆಂಗಳೂರು, ಮೈಸೂರು ಆಕಾಶವಾಣಿಯಲ್ಲಿ ಅನೇಕ ರೇಡಿಯೋ ನಾಟಕ, ಜನಪದ ರೂಪಕಗಳ ರಚನೆ ಹಾಗೂ ಪ್ರಸಾರವನ್ನು ಮಾಡಿದರು. ಇದರ ಜೊತೆಯಲ್ಲಿಯೇ ಅನೇಕ ರಂಗ ಕಾರ್ಯಕ್ರಮಗಳ ನಿರ್ದೇಶನವನ್ನು ಮಾಡಿದರು.

ಇವರು ಜನಪದ ಸಾಹಿತ್ಯವನ್ನು ಸಂಗ್ರಹಿಸುವಾಗ ಬಹಳಷ್ಟು ತೊಂದರೆಯನ್ನು ಅನುಭವಿಸಿದ್ದಾರೆ. ಅದರಲ್ಲಿ ಆರ್ಥಿಕ ತೊಂದರೆಯೇ ಹೆಚ್ಚು. ತುಂಬು ಸಂಸಾರ. ಸಂಸಾರ ಸಾಗಿಸುವುದೇ ಕಷ್ಟವಾಗಿದ್ದಾಗ, ಸಂಗ್ರಹಕಾರ್ಯ ಇನ್ನೂ ಕಷ್ಟವಾಯಿತು. ಆಗ ಇವರಿಗೆ ಹೊಳೆದ ಉಪಾಯವೆಂದರೆ ಶಾಲಾ, ಕಾಲೇಜುಗಳಲ್ಲಿ ಜನಪದ ಸಾಹಿತ್ಯದ ಬಗ್ಗೆ ಉಪನ್ಯಾಸ ನೀಡಿ ಅಲ್ಲಿ ವಿದ್ಯಾರ್ಥಿಗಳಿಂದ ಪಡೆದ ಹಣದಿಂದ ಸಂಚರಿಸಿ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು.

ಮತಿಘಟ್ಟ ಕೃಷ್ಣಮೂರ್ತಿಯವರು ಜನಪದ ಕಲಾವಿದರಿಂದ ಸಾಹಿತ್ಯವನ್ನು ಸಂಗ್ರಹಿಸುವಾಗ ಅವರಿಗೆ ಹಣ, ಊಟ ಕೊಟ್ಟಿದ್ದಾರೆ. ಬಸ್ಸು, ರೈಲಿನಲ್ಲಿ ಪ್ರಯಾಣಿಸುವಾಗ, ಪಕ್ಕದ ಸಹ ಪ್ರಯಾಣಿಕರು ಹಾಡುವವರು ಸಿಕ್ಕರೆ ಅವರೊಂದಿಗೆ ಇಳಿದು, ಅವರೊಟ್ಟಿಗೆ ಹೋಗಿ ಸಂಗ್ರಹಿಸಿದ್ದಾರೆ. ಒಂದೊಂದು ಮನೆಯಲ್ಲಿ ಒಂದೊಂದು ಹೊತ್ತು ಊಟ. ಬ್ರಾಹ್ಮಣ ಎಂಬ ಮಡಿವಂತಿಕೆ ಇಲ್ಲ, ಜಾತಿ ಭೇದವಿಲ್ಲ. ಮೇಲು

ಕೀಳು ಎಂಬ ಭಾವನೆಯಿಲ್ಲದೆ ಎಲ್ಲರನ್ನೂ ಸಮಾನವಾಗಿ, ಮನುಷ್ಯ ಪ್ರೀತಿಯಿಂದ ಕಾಣುತ್ತಿದ್ದ ಸ್ವಭಾವ. ಇದಕ್ಕೆಲ್ಲ ಸಂಪೂರ್ಣವಾಗಿ ಸಹಕಾರ ನೀಡಿದವರು ಧರ್ಮಪತ್ನಿ, ಸಾಧು ಸ್ವಭಾವದ, ಕಷ್ಟದಲ್ಲಿಯೂ ಸುಖವನ್ನೇ ಕಾಣುತ್ತಿದ್ದ ಲಲಿತಮ್ಮ. ಇವರಿಗೆ ಹತ್ತು ಹೆಣ್ಣು ಮಕ್ಕಳು; ಒಬ್ಬ ಮಗ. ಮಗ ಈಗ ಒಳ್ಳೆಯ ಹುದ್ದೆಯಲ್ಲಿದ್ದಾರೆ.

ಮತಿಘಟ್ಟ ಕೃಷ್ಣಮೂರ್ತಿಯವರು ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕಾದ್ಯಂತ ಸಂಚರಿಸಿ ಸಂಗ್ರಹಿಸಿರುವ ಜಾನಪದ ಸಾಮಗ್ರಿಯನ್ನು ನೋಡಿದರೆ ಅವರು ಕೇವಲ ಜಾನಪದದ ಬಗ್ಗೆ ಆಸಕ್ತಿ ಹೊಂದಿರುವುದರ ಜೊತೆಗೆ, ಜನಪರ ನಿಲುವನ್ನು ಹೊಂದಿದವರು ಕೂಡ ಆಗಿದ್ದಾರೆ ಎಂಬುದು ತಿಳಿಯುತ್ತದೆ. ಭಾರತೀಯ ಸಂಸ್ಕೃತಿಯ ವಕ್ತಾರರಾಗಿ, ಸಂಸ್ಕೃತಿಯ ಉಳಿವಿಗಾಗಿ, ಮಾಡಿರುವ ಸಾಧನೆ ಪ್ರಶಂಸಾರ್ಹ. ನಮ್ಮ ಸಂಸ್ಕೃತಿಯಲ್ಲಿ ಬ್ರಾಹ್ಮಣ ಸಮುದಾಯ ಮೇಲಿನಸ್ತರದ್ದು ಎಂಬ ನಂಬಿಕೆ. ಈ ಸ್ತರದಲ್ಲಿ ಹುಟ್ಟಿ ಬೆಳೆದ ಇವರು ಸಾಮಾನ್ಯರಲ್ಲಿ ಸಾಮಾನ್ಯರಾದ ಜನಪದರೊಡನೆ ಬೆರೆತು, ಕಲೆತು ಅವರಲ್ಲಿರುವ ಜಾನಪದ ಸಂಪತ್ತನ್ನು ಸಂಗ್ರಹಿಸಿ ನಶಿಸದಂತೆ ಹಿಡಿದಿಟ್ಟಿರುವುದು ಕೃಷ್ಣಮೂರ್ತಿಯವರಲ್ಲಿರುವ ಸಾಂಸ್ಕಾತಿಕ ಕಾಳಜಿಯನ್ನು ತೋರುತ್ತದೆ. ಇವರು ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದ್ದಾರೆ. ಇದಕ್ಕೆ ತಾವು ಹುಟ್ಟಿ ಬೆಳೆದ ಪರಿಸರದಿಂದ ಸ್ಫೂರ್ತಿ ಪಡೆದಿದ್ದಾರೆ. ಮೇಲ್ವರ್ಗದ ಸಂಸ್ಕೃತಿಯವರಾದರೂ ಇತರರ ಸಂಸ್ಕೃತಿಯೊಂದಿಗೆ ಹೊಂದಿಕೊಂಡು ಬಾಳಿದರು. ಹಿರಿಯ ವಿದ್ವಾಂಸರ ಬರವಣಿಗೆಗಳಿಂದ ಪ್ರೋತ್ಸಾಹಿತರಾಗಿರುವುದರೊಂದಿಗೆ ಅವರ ಪ್ರಶಂಸೆಯೂ ಈ ಕೆಲಸ ಮಾಡಲು ಬೆನ್ನೆಲುಬಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ನೆಲಸಂಸ್ಕೃತಿಯ

ಕಡೆಗೆ ಇದ್ದ ಒಲವು, ದೇಶೀಯತೆಯನ್ನು ಉಳಿಸಿ ಬೆಳೆಸಬೇಕೆನ್ನುವ ಅಪಾರವಾದ ವಾತ್ಸಲ್ಯ, ಅಭಿಮಾನ, ಅವರನ್ನು ಬಡತನದಲ್ಲೂ ನಾಡಿನಾದ್ಯಂತ ಸಂಚರಿಸುವಂತೆ ಮಾಡಿದೆ. ಈ ಎಲ್ಲಾ ಕಾರಣಗಳಿಂದ ಜಾನಪದ ಸಂಗ್ರಹಕಾರರು ಮತ್ತು ವಿದ್ವಾಂಸರಲ್ಲಿ ಇವರಿಗೆ ಮೊದಲ ಸ್ಥಾನ ದೊರಕುತ್ತದೆ.

ಮತಿಘಟ್ಟ ಕೃಷ್ಣಮೂರ್ತಿಯವರು ಒಬ್ಬ ವ್ಯಕ್ತಿಯಲ್ಲ; ಒಂದು ಸಂಸ್ಥೆ. ಏಕೆಂದರೆ ಒಂದು ಸಂಸ್ಥೆ ಮಾಡುವ ಕೆಲಸವನ್ನು ಇವರೊಬ್ಬರೇ ಮಾಡಿರುವುದು ಇದಕ್ಕೆ ಸಾಕ್ಷಿ. ಇವರು ಸಂಗ್ರಹಿಸಿರುವ ಜನಪದ ಸಾಹಿತ್ಯ ಸಾಮಗ್ರಿ ಸುಮಾರು ಹತ್ತುಸಾವಿರ ಪುಟಗಳಷ್ಟಿದೆ. ಇವರು ಸಂಗ್ರಹಿಸಿದ ಹಲವಾರು ಜನಪದ ಗೀತೆಗಳಿಂದ ಕೆಲವನ್ನು ಆಯ್ದು ಉಯ್ಯಾಲೆ ಮತ್ತು ಝೇಂಕಾರ ಎಂಬ ಹೆಸರಿನಲ್ಲಿ ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ.

ಇವರಿಗೆ ದೊರಕಿರುವ ಪ್ರಶಸ್ತಿಗಳು ಅನೇಕ. ಕರ್ನಾಟಕದ ಹಲವಾರು ಸಂಘ ಸಂಸ್ಥೆಗಳು ಜಾನಪದ ಭೀಷ್ಮ, ಜಾನಪದ ರತ್ನ ಇತ್ಯಾದಿ ಪ್ರಶಸ್ತಿಗಳನ್ನು ನೀಡಿ ಗೌರಿವಿಸಿವೆ. ಶ್ರೀಯುತರು ಬೇಲೂರು ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ತಮ್ಮ ಹುಟ್ಟೂರಾದ ಮತಿಘಟ್ಟದಲ್ಲಿಯೂ ಸನ್ಮಾನಕ್ಕೆ ಪಾತ್ರರಾದರು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿದ್ದರು. ಇವರು ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಒಟ್ಟಾರೆ ಸಾಧನೆಗಾಗಿ

ಕರ್ನಾಟಕ ಸರ್ಕಾರವು 2002 ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

ಇವರ ಪ್ರಕಟಿತ ಕೃತಿಗಳೆಂದರೆ ನಾಡ ಪದಗಳು, ನಮ್ಮ ಹಳ್ಳಿಯ ಹಾಡುಗಳು, ಏಳುಕೊಳ್ಳದ ಎಲ್ಲಮ್ಮ, ಶಕುನದ ಹಕ್ಕಿ ಮತ್ತು ಇತರ ಕಥೆಗಳು, ಕನ್ನಡ ಜನಪದ ಸಾಹಿತ್ಯ ಭಂಡಾರ ಸಂಪುಟ–೧ ಗೀತೆಗಳು, ಕನ್ನಡ ಜನಪದ ಸಾಹಿತ್ಯ ಭಂಡಾರ ಸಂಪುಟ – ೨ ಗೃಹಿಣಿ ಗೀತೆಗಳು, ಹೊನ್ನ ಹೊತ್ತಿಗೆ, ಕಿರುಲಾವಣಿಗಳು (2001), ಹಾಸನ ಜಿಲ್ಲೆಯ ಕೋಲಾಟದ ಪದಗಳು ಮತ್ತು ಕನ್ನಡ ಜನಪದ ಮಕ್ಕಳ ಕಥೆಗಳು (2007). ಇವೆಲ್ಲವೂ ಜನಪದ ಕೃತಿಗಳು. ಪಚ್ಚೆತೆನೆ (1958), ಪಂಚತಂತ್ರದ ಕಥೆಗಳು, ಇವು ಕಥಾಸಂಕಲನಗಳು. ಮರುಗಿ (1959), ಕಳಸಾಪುರದ ಹುಡುಗರು, ಕಾದಂಬರಿಗಳು. ಗಂಡನ ಪೂಜೆ (1958), ಹೊಂಬಾಳೆ (1958), ಕಲ್ಯಾಣಿ (1960), ಹೊಸಹಳ್ಳಿ (1960), ಭರತಪ್ಪನ ಸೊಂಟಕ್ಕೆ ಗಂಟೆ (1960), ನಾಟಕಗಳು. ತಮ್ಮ 93ನೇ ಇಳಿವಯಸ್ಸಿನಲ್ಲಿಯೂ ಅಡಾವುಡಿ, ಬಸವಣ್ಣನ ಬಾಲ್ಯ ಹಾಗೂ ಸರ್ಜಪ್ಪನಾಯಕ ಮುಂತಾದ ಕಾದಂಬರಿಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರು 2006ನೇ ಜುಲೈ 27 ರಂದು ತಮ್ಮ 94ನೇ ವಯಸ್ಸಿನಲ್ಲಿ ತುಂಬುಜೀವನ ನಡೆಸಿ ದೈವಾಧೀನರಾದರು.

ಏಳುಕೊಳ್ಳದ ಎಲ್ಲಮ್ಮ : ಸವದತ್ತಿ ಎಲ್ಲಮ್ಮನ ಕ್ಷೇತ್ರ ಪರಿಚಯವನ್ನೊಳಗೊಂಡಿರುವ ಹಾಗು ಮಹಿಮೆಯೇ ಪ್ರಧಾನವಾದ ಕೃತಿ “ಏಳುಕೊಳ್ಳದ ಎಲ್ಲಮ್ಮ”. ಈ ಕೃತಿ 1965ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಎಲ್ಲಮ್ಮನನ್ನು ವರ್ಣಿಸುವ ಪದ್ಯಗಳಿದ್ದು ಜೊತೆಗೆ ಗದ್ಯದಲ್ಲಿಯೂ ವಿವರಣೆ ಇದೆ. ಎಲ್ಲಮ್ಮನ ಭಕ್ತರಿಗೆ ಮತ್ತು ಆ ಪ್ರದೇಶದಲ್ಲಿ ಪ್ರವಾಸ

ಮಾಡುವವರಿಗೆ ಪೂರ್ಣ ವಿವರಣೆಯನ್ನೊದಗಿಸುವ ಕೈಪಿಡಿಯಂತಿದೆ. ಭಾರತ ಹುಣ್ಣಿಮೆಯಂದು ನಡೆಯುವ ಎಲ್ಲಮ್ಮನ ಜಾತ್ರೆಯು ವೈಭವೋಪೇತವಾಗಿ ವರ್ಣನೆಗೊಂಡಿದೆ. ಎಲ್ಲಮ್ಮನ ಹುಟ್ಟು, ಬೆಳವಣಿಗೆಯ ಮಹತ್ವದ ವಿಚಾರಗಳು ಇವೆ. ಎಲ್ಲಮ್ಮ ಮೊದಲು ಜೈನ ದೇವರಾಗಿ, ನಂತರ ಹಿಂದೂ ದೇವತೆಯಾಗಿದ್ದಾಳೆ. ಮೊದಲಿಗೆ ಬ್ರಾಹ್ಮಣರ ಹಿಡಿತಕ್ಕೆ ಒಳಗಾಗಿ, ಈಗ ವೀರಶೈವರ ವಶದಲ್ಲಿದ್ದು ಪೂಜೆ ಪುನಸ್ಕಾರಗಳು ನಡೆಯುತ್ತಿವೆ. ಎಲ್ಲಮ್ಮ ತೋರುವ ಪವಾಡಗಳು, ಭಕ್ತ ಸ್ತ್ರೀಯರು ಬೆತ್ತಲೆ ಸೇವೆ ಮಾಡುವ ಸಂದರ್ಭದಲ್ಲಿ ಅವರ ಭಕ್ತಿಯು ಪರಾಕಾಷ್ಠೆ ಮುಟ್ಟುವುದು ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ಬೆತ್ತಲೆ ಸೇವೆ ಭಕ್ತರ ಹರಕೆಯು ಜಾನಪದೀಯ ಆಚರಣೆಯಾಗಿದ್ದರೂ ಈಗ ನಾಗರಿಕ ಪ್ರಜ್ಞಾವಂತರು ಅಂತಹ ಆಚರಣೆಗಳ ನಿಷೇಧದ ಬಗ್ಗೆ ತಿಳುವಳಿಕೆ ಮೂಡಿಸುವುದು ಆವಶ್ಯಕ. ಅಲ್ಲಿಯ ಮತ್ತೊಂದು ವೈಶಿಷ್ಟ್ಯವೆಂದರೆ ಎಲ್ಲಮ್ಮನ ಗುಡ್ಡದಲ್ಲಿ 'ಪೀರಭವರ ಶಹಾವಲಿ' ಎಂಬ ಮುಸ್ಲಿಂ ದರ್ಗಾ ಇದ್ದು ಎಲ್ಲಮ್ಮನಿಗೆ ಬರುವ ಭಕ್ತರು ದರ್ಗಾಕ್ಕೂ ಪೂಜೆ ಸಲ್ಲಿಸುವುದು. ಇದು ಸರ್ವಧರ್ಮ ಸಮನ್ವಯದ ಕುರುಹಾಗಿದೆ. ಒಟ್ಟಿನಲ್ಲಿ ಇದೊಂದು, ಎಲ್ಲಮ್ಮನ ಕ್ಷೇತ್ರದ ಸಾಂಸ್ಕೃತಿಕ ಪರಂಪರೆಯನ್ನು ತೆರೆದಿಡುವ ಮೌಲ್ಯಯುತ ಕೃತಿಯಾಗಿದೆ.

ಶಕುನದ ಹಕ್ಕಿ ಮತ್ತು ಇತರ ಜನಪದ ಕತೆಗಳು : ಇದು ಜನಪದ ಕಥಾಸಂಕಲನ. 1969ರಲ್ಲಿ ಪ್ರಕಟವಾಗಿದೆ. ಈ ಕೃತಿಯಲ್ಲಿ ಹನ್ನೊಂದು ಕಥೆಗಳಿದ್ದು ಅವುಗಳನ್ನು ಹಾಸನ, ದಕ್ಷಿಣ ಕನ್ನಡ, ಧಾರವಾಡ, ಬೆಳಗಾವಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಸಂಗ್ರಹಿಸಿದ್ದಾರೆ. ಆದರೆ ಬಹುಪಾಲು ಕಥೆಗಳು ಹಾಸನ ಜಿಲ್ಲೆಯಲ್ಲಿ ಸಂಗ್ರಹಿಸಿದವುಗಳಾಗಿವೆ. ಈ ಕಥೆಗಳು ಹಿಂದಿನ

ನಲವತ್ತು ವರ್ಷದಿಂದ ಪ್ರಾರಂಭಿಸಿ ಪ್ರಕಟಣೆಯ ವರ್ಷದವರೆವಿಗೂ ಸಂಗ್ರಹಿಸಿದವುಗಳಾಗಿದೆ. ಇಲ್ಲಿರುವ ಹಲವಾರು ಕಥೆಗಳು ನೇರ ಸಂಗ್ರಹಕ್ಕಿಂತ ತಮ್ಮ ತಂದೆಯವರಿಂದ ಹಾಗೂ ಇತರರಿಂದ ಕೇಳಿದವುಗಳು ಎಂಬುದಾಗಿ ಸಂಪಾದಕರೇ ಹೇಳಿದ್ದಾರೆ. ಆದ್ದರಿಂದ ಇಲ್ಲಿ ಗ್ರಾಮ್ಯ ಭಾಷೆಗಿಂತ ಗ್ರಂಥಸ್ಥ ಭಾಷೆ ಇರುವುದು ಸ್ಪಷ್ಟವಾಗಿ ಕಾಣುತ್ತದೆ. ಕೃತಿಯ ಬಿನ್ನಹ ಭಾಗದಲ್ಲಿ ಸಂಪಾದಕರು ಜನಪದ ಸಾಹಿತ್ಯ ನಾಶವಾಗುತ್ತಿರುವುದರ ಬಗ್ಗೆ ಚಿಂತಿಸಿದ್ದಾರೆ. ಸಂಸ್ಕೃತಿಯ ಅರಿವಿನಿಂದ ಸಾಹಿತ್ಯ ಪುನರುಜ್ಜೀವನ ಪಡೆಯುತ್ತದೆ; ನೆಲಮೂಲ ಸಂಸ್ಕೃತಿಯ ಪ್ರತಿಪಾದನೆಯಿಂದ ಜನಪದ ಸಂಸ್ಕೃತಿ ಅರಳುತ್ತದೆ ಎಂದಿದ್ದಾರೆ.

ಈ ಸಂಕಲನದ ಕಥೆಗಳಲ್ಲೆಲ್ಲಾ ಶ್ರೇಷ್ಠ ಕಥೆ 'ಶಕುನದ ಹಕ್ಕಿ'. ವ್ಯಕ್ತಿಯ ಅದೃಷ್ಟವನ್ನೇ ಬದಲಿಸುವ ಕಥೆ. ಶಕುನದ ಹಕ್ಕಿಗೆ ಜಾನಪದದಲ್ಲಿ ವಿಶಿಷ್ಟ ಸ್ಥಾನ ಇದೆ. ಹಳ್ಳಿಯ ಬುಡಬುಡಕೆಯವರು ಅಮಾವಾಸ್ಯೆಯ ನಡುರಾತ್ರಿಯಲ್ಲಿ ಜಾಬುಕಟ್ಟಿ ಭವಿಷ್ಯನುಡಿಯುವ ಈ ಹಕ್ಕಿಯ ಸಹಾಯುವನ್ನು ಪಡೆಯುವುದನ್ನು ಇಂದಿಗೂ ಕಾಣಬಹುದು. 'ಗುರುವಾಕ್ಯ' ಕಥೆಯಲ್ಲಿ ಗುರುವಿನ ಮಹತ್ವವಿದ್ದರೆ, 'ಜಾಣಕತ್ತೆ' ಕಥೆಯಲ್ಲಿ ಕತ್ತೆಯ ಬುದ್ಧಿವಂತಿಕೆ ಇದೆ. ರಾಜಕುಮಾರ ತಂಗಿಯುನ್ನೇ ಮದುವೆಯಾಗಲು ಪ್ರಯತ್ನಿಸುವುದು 'ಚಂದ್ರಕಾಂತ' ಕಥೆಯಲ್ಲಿದೆ. ಇಲ್ಲಿಯ ಕಥೆಗಳು ಕಥನಕೌಶಲ್ಯದಿಂದ ಕೂಡಿದ್ದು, ಎಲ್ಲಾ ಜನಪದ ಕಥೆಗಳಲ್ಲಿರುವಂತೆ ಇಲ್ಲಿಯೂ ಅತಿಮಾನುಷ ಶಕ್ತಿಗಳ ಕೈ ಮೇಲಾಗುವುದನ್ನು ಕಾಣಬಹುದು. ಜನಪದ ಕಥೆಗಳಲ್ಲಿ ಸಾಮಾನ್ಯವಾಗಿ ಶಿಷ್ಟವ್ಯಕ್ತಿಗಳ ಹೆಸರುಗಳು ಬರುವುದಿಲ್ಲ. ಈ ಸಂಗ್ರಹದಲ್ಲಿ ಬರುವ ವಿಷ್ಣುಶರ್ಮ ಎಂಬ ಹೆಸರು ಪಂಚತಂತ್ರದ ಕಥೆಯಲ್ಲಿ ಬರುವುದಾಗಿದ್ದು,

ಕಥೆಗಾರನಿಗೆ ಪಂಚತಂತ್ರ ಪ್ರೇರಣೆಯಾಗಿರಬಹುದು. ಇದೇ ರೀತಿ ಅಪ್ಪಾಜಿಭಟ್ಟ, ಮಲ್ಲಾಸುರನ ಹೆಂಡತಿ ಕೋಮಲೆ, ಓರಂಗಲ್ಲು ಪ್ರತಾಪರುದ್ರ ಮುಂತಾದ ಹೆಸರುಗಳೂ ಕೂಡ ಇಲ್ಲಿ ಬಂದಿವೆ. ಮಾಸ್ತಿಕಲ್ಲಿನ ಕಥೆ ದಂತಕಥೆಯಗಿ ಬಂದಿರುವುದು ವಿಶೇಷವಾಗಿದೆ.

ನಾಡಪದಗಳು : ಮತಿಘಟ್ಟ ಕೃಷ್ಣಮೂರ್ತಿಯವರು ಮತ್ತು ಇವರ ಅಣ್ಣ ಮುತ್ತುರಾಮಸ್ವಾಮಿಯವರು ಒಟ್ಟಿಗೆ ಸೇರಿ ಸಂಗ್ರಹಿಸಿರುವ ಜನಪದ ಗೀತೆಗಳ ಸಂಕಲನ "ನಾಡ ಪದಗಳು" ಕೃತಿ 1947ರಲ್ಲಿ ಪ್ರಕಟವಾಗಿದೆ. ಇದರ ಸಂಪಾದಕರು ಹಾಗು ಪ್ರಕಾಶಕರು ಇವರ ಅಣ್ಣನವರಾದ ಎಲ್. ಗುಂಡಪ್ಪನವರು. ಈ ಕೃತಿಗೆ ಜಾನಪದ ಕ್ಷೇತ್ರದಲ್ಲಿ ತುಂಬಾ ಮಹತ್ವವಿದೆ. ಆರಂಭದ ಕಾಲ ಹಾಗು ಸ್ವಾತಂತ್ರ್ಯದ ಸಂಭ್ರಮದ ವರ್ಷ ಪ್ರಕಟವಾಗಿರುವದರೊಂದಿಗೆ, ಹಲವಾರು ವಿದ್ವಾಂಸರಿಂದ ಪ್ರಶಂಸೆಗೆ ಒಳಗಾಗಿದೆ. ಬಿ.ಎಂ. ಶ್ರೀಯುವರು ಮಹತ್ವಪೂರ್ಣವಾದ ಮುನ್ನುಡಿಯನ್ನು ಬರೆದಿದ್ದಾರೆ. ಈ ಕೃತಿಯಲ್ಲಿ ಮೂಲ ಸೊಗಡಿನ ವೈವಿಧ್ಯಪೂರ್ಣವಾದ ಗೀತೆಗಳು ಇವೆ. ಇಲ್ಲಿಯ ವೈಶಿಷ್ಟ್ಯವೆಂದರೆ ಟಿಪ್ಪುಸುಲ್ತಾನನನ್ನು ಕುರಿತ ಇಂಗ್ಲಿಷ್‌ಲಾವಣಿಗಳನ್ನು ಕನ್ನಡಕ್ಕೆ ಅನುವಾದಿಸಿರುವುದು.

ನಮ್ಮ ಹಳ್ಳಿಯ ಹಾಡುಗಳು : ಇವರ ಮತ್ತೊಂದು ಕೃತಿ "ನಮ್ಮ ಹಳ್ಳಿಯ ಹಾಡುಗಳು". ಗಾತ್ರದಲ್ಲಿ ಚಿಕ್ಕದಾದರೂ ಶ್ರೇಷ್ಠತೆಯಲ್ಲಿ ಮಹತ್ವಪೂರ್ಣವಾದುದಾಗಿದೆ. ವಿಭಿನ್ನವಾದ ಗೀತೆಗಳು ಇಲ್ಲಿದ್ದು, ಜನಪದರ ನಿಜಜೀವನದ ಚಿತ್ರಣಗಳನ್ನು ಕಟ್ಟಿಕೊಡುವ ಕೃತಿ ಇದಾಗಿದೆ.

ಗೀತೆಗಳು : ಮತಿಘಟ್ಟ ಕೃಷ್ಣಮೂರ್ತಿಯವರ ಜಾನಪದ ಸಾಧನೆಯ ಶಕ್ತಿ ಸಾಮರ್ಥ್ಯವನ್ನು ಸಾಬೀತುಪಡಿಸಿರುವ ಕೃತಿಯೆಂದರೆ

"ಕನ್ನಡ ಜನಪದ ಸಾಹಿತ್ಯ ಭಂಡಾರ ಸಂಪುಟ–೧ ಗೀತೆಗಳು" ಇದು 1975ರಲ್ಲಿ ಪ್ರಕಟವಾಗಿದೆ. ಒಂದು ಸಾವಿರದ ಐವತ್ಮೂರು ಪುಟಗಳ ನಾಲ್ಕುನೂರ ಎಂಟು ಗೀತೆಗಳನ್ನೊಳಗೊಂಡಿರುವ ಕೃತಿ.

ಕೃತಿಯ ಬಿನ್ನಹ ಭಾಗದಲ್ಲಿ ಕೃಷ್ಣಮೂರ್ತಿಯವರು "ಕನ್ನಡ ಜನಪದ ಸಾಹಿತ್ಯ ಸಂಗ್ರಹಣೆ, ಪ್ರಕಟಣೆ ಹಾಗೂ ಸಂಪಾದನೆಯ ಕಾರ್ಯವೀಗ ಹಿಂದೆಂದಿಗಿಂತಲೂ ಹೆಚ್ಚು ವ್ಯಾಪಕವಾಗಿ ತೀವ್ರಗತಿಯಿಂದ ನಡೆಯಬೇಕಾದುದು ಅಗತ್ಯವೆನಿಸಿದೆ; ತಲೆತಲಾಂತರದಿಂದ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹರಿದು ಬೆಳೆದು ಬಂದ ನಮ್ಮೀ ಸಾಹಿತ್ಯ ವಾಹಿನಿಯು ಈ ಶತಮಾನದ ಆರಂಭದಲ್ಲೇ ಆಧುನಿಕ ನಾಗರಿಕತೆಯ ಮರಳುಗಾಡನ್ನು ಪ್ರವೇಶಿಸಿ, ತನ್ನ ಮೈಸಿರಿಯನ್ನು ಕಳೆದುಕೊಂಡು, ಈಗ ಬಡವಾಗಿ ಕಂದಿ ಕುಂದಿ, ಅನತಿ ಭವಿಷ್ಯದಲ್ಲೇ ಸಂಪೂರ್ಣವಾಗಿ ಇಂಗಿ ಹೋಗುವ ಅಪಾಯಕ್ಕೆ ಪಕ್ಕಾಗಿದೆ" ಎಂಬುದಾಗಿ ಹೇಳಿರುವುದರಲ್ಲಿ ಜನಪದ ಸಾಹಿತ್ಯ ಹೆಚ್ಚು ಹೆಚ್ಚು ಸಂಗ್ರಹ ಆಗಬೇಕೆಂಬ ತೀವ್ರತರವಾದ ತುಡಿತವಿರುವುದನ್ನು ಕಾಣುತ್ತೇವೆ. ಆಧುನಿಕ ನಾಗರಿಕತೆ ಮರಳುಗಾಡು. ತಿರುಳಿರುವುದು ಜನಪದ ಸಾಹಿತ್ಯದಲ್ಲಿ. ಅದನ್ನು ಜೋಪಾನ ಮಾಡಬೇಕೆಂಬ ಕಳಕಳಿ, ಅಭಿಲಾಷೆ ಇದೆ.

ಹಬ್ಬ ಹುಣ್ಣಿಮೆಗಳು ಕಡಿಮೆಯಾಗಿದ್ದು, ಮದುವೆ ಮುಂಜಿಗಳಲ್ಲಿ ಜನಪದ ಹಾಡುಗಳನ್ನು ಹೇಳದಿರುವುದೇ ಜನಪದ ಸಾಹಿತ್ಯ ಇಂಗಿ ಹೋಗಲು ಕಾರಣ ಎಂಬ ವ್ಯಥೆಯೂ ಇವರಲ್ಲಿದೆ. "ಸಂಗ್ರಹಕಾರರು ಪಾಠಾಂತರಗಳು ದೊರಕದೆ ತಾವೇ ತಮ್ಮ ಮನಸ್ಸಿಗೆ ಸರಿದೋರಿದಂತೆ ಹಾಡುಗಳನ್ನು ತಿದ್ದುವುದು ಯುಕ್ತವಲ್ಲ... ವ್ಯಾಕರಣ ದೋಷಗಳಿದ್ದರೆ,

ಅಪಾರ್ಥಕ್ಕೆಡೆಕೊಡುವ ಭಾಗಗಳಿದ್ದರೆ, ವಿಪರೀತ ಅಸ್ಪಷ್ಟತೆ ಇದ್ದರೆ ಅಂಥ ಹಾಡುಗಳನ್ನು ಪಾಠಾಂತರ ದೊರೆಯುವವರಿಗೆ ಪ್ರಕಟಿಸದೆ ಇಟ್ಟುಕೊಳ್ಳಬಹುದು... ಪ್ರಾಸಾಕ್ಷರಗಳಿರಲೇಬೇಕೆಂದು ತ್ರಿಪದಿಗಳನ್ನೆಲ್ಲಾ ಹಿಗ್ಗಾಮುಗ್ಗಾ ಜಗ್ಗಾಡಿಸಿ ತಿದ್ದುವುದು ಸರ್ವಥಾ ಸಲ್ಲದು" (ಪುಟ 14, 15) ಎಂದು ಮನಸ್ಸಿಗೆ ಬಂದಂತೆ ತಿದ್ದುವವರ ಬಗ್ಗೆ ಎಚ್ಚರಿಕೆಯ ಕಿವಿಮಾತು ಹೇಳಿದ್ದಾರೆ.

ಈ ಕೃತಿಯಲ್ಲಿರುವ ಹಾಡುಗಳನ್ನು ನಾಡಿನೆಲ್ಲೆಡೆ ಪ್ರಮುಖವಾಗಿ ಹಾಸನ, ಚಿಕ್ಕಮಗಳೂರು, ತುಮಕೂರು ಜಿಲ್ಲೆಯಲ್ಲಿ ಸಂಗ್ರಹಿಸಿದ್ದಾರೆ. ಬೆಟಗೇರಿ ಕೃಷ್ಣಶರ್ಮ ಅವರ ಮೊದಲ ನುಡಿಗಳು ಮೌಲ್ಯಯುತವಾದವುಗಳಾಗಿವೆ. ಸಂಪಾದಕರು ಕೆಲವು ಜನಪದ ಸಂಕೇತಗಳನ್ನು ಕೊಟ್ಟಿದ್ದಾರೆ. ಅವುಗಳೆಂದರೆ ಹೆಣ್ಣು ನೀರಿನ, ಭೂಮಿಯ ಸಂಕೇತವಾದರೆ ; ನೀರು ಕೇಳುವುದು, ನೇಗಿಲು ಗಂಡಿನ ಪ್ರೇಮಯಾಚನೆಯ ಸಂಕೇತ. ನೀರು ಕುಡಿಯುವುದು ಮಿಲನ ಸಂಕೇತ. ನಿಂಬೆ, ಕಿತ್ತಲೆ, ಹೆಣ್ಣಿನ ವಯಸ್ಸಿನ ಸಂಕೇತಗಳಾಗಿದ್ದು, ಇವು ಅಧ್ಯಯನಕಾರರಿಗೆ ಉಪಯುಕ್ತವಾಗಿವೆ.

ಕೃತಿಯ ಆರಂಭದಲ್ಲಿ ಜನಪದ ಛಂದಸ್ಸಿನ ಬಗ್ಗೆ ಕೂಲಂಕಷವಾಗಿ ವಿವರಣೆಯನ್ನು ನೀಡಿದ್ದಾರೆ. ದ್ವಿಪದಿ, ಏಳೆ, ತ್ರಿಪದಿ, ಚತುಷ್ಪದಿ, ಪಂಚಪದಿ, ಷಟ್ಪದಿ, ಅಷ್ಟಪದಿ, ರಗಳೆ, ಸಾಂಗತ್ಯ, ಧವಳ, ಲಾವಣಿ, ದುಂದುಮೆ ಹಾಗು ಅಪರೂಪದ ಛಂದಸ್ಸು ಎಂಬವುಗಳನ್ನು ಪೂರ್ಣವಿವರಣೆಯೊಂದಿಗೆ ತಿಳಿಸಿದ್ದಾರೆ. ತ್ರಿಪದಿಯ ಹಿರಿಮೆಯನ್ನು ಕುರಿತು ಹೇಳುತ್ತಾ ತ್ರಿಪದಿ ಎಂದು ಪ್ರಸಿದ್ಧವಾದ ಛಂದೋರೂಪಗಳಲ್ಲದೆ,

ಮೂರು ಪಾದಗಳನ್ನುಳ್ಳ ಬೇರೆ ರೀತಿಯ ಪದಗಳೂ ಜನಪದ ಸಾಹಿತ್ಯದಲ್ಲಿವೆ. ಗ್ರಾಮೀಣರು ಹಾಡುವ ಧಾಟಿಯನ್ನು ಅನುಸರಿಸಿ ಸಂಪಾದಕರು ಅವುಗಳನ್ನು ಸೊಲ್ಲು, ತನಿಸೊಲ್ಲು, ಸವಿಸೊಲ್ಲು ಎಂದು ಹೆಸರುಗಳನ್ನು ಸೂಚಿಸಿರುವುದಲ್ಲದೆ ಶುದ್ಧ ತ್ರಿಪದಿ ಮತ್ತು ಪ್ರಬುದ್ಧ ತ್ರಿಪದಿಗಳೆಂದು ವಿಭಾಗಿಸಿ ವಿವರಣೆ ಕೊಟ್ಟಿದ್ದಾರೆ. ಇದೊಂದು ಸಂಶೋಧನೆಯ ಕೆಲಸವಾಗಿದ್ದು, ಮುಂದಿನ ಅಧ್ಯಯನಕಾರರಿಗೆ ಮಾರ್ಗದರ್ಶನದಂತಿದೆ.

ಇಲ್ಲಿ ಗೀತೆಗಳನ್ನು ಕೋಲಾಟದ ಪದಗಳು, ಬೀಸುವ ಪದಗಳು, ಸೋಬಾನೆ ಪದಗಳು, ನಾಲ್ಕು ಹಬ್ಬಗಳು, ಕಥನ ಗೀತೆಗಳು ಎಂಬುದಾಗಿ ವರ್ಗೀಕರಿಸಿಕೊಂಡಿದ್ದಾರೆ. ಕೋಲಾಟದ ಪದಗಳನ್ನು ಪ್ರಾರ್ಥನಾ ಗೀತೆಗಳು, ಪ್ರೇಮ ಗೀತೆಗಳು, ಚಾರಿತ್ರಿಕ ಗೀತೆಗಳು, ಕ್ಷಾಮಗೀತೆಗಳು ಮತ್ತು ಸಂಕೀರ್ಣಗೀತೆಗಳೆಂದು ಒಳಭಾಗಗಳಾಗಿ ವಿಂಗಡಿಸಿದ್ದಾರೆ. ಐವತ್ತಾರು ಪ್ರಾರ್ಥನಾಗೀತೆಗಳಿವೆ. ಗಣಪತಿ, ಗ್ರಾಮದೇವತೆಗಳು ಮುಂತಾದ ಪ್ರಕಾರಗಳಿವೆ. ಅವುಗಳಲ್ಲಿ ಚಾಮುಂಡಿ, ಬೇಲೂರು ಚನ್ನಯ್ಯ, ಚೌಡವ್ವ, ದುರ್ಗವ್ವ, ಕೃಷ್ಣನಿಗೆ ಸಂಬಂಧಿಸಿದ ಗೀತೆಗಳು ಪ್ರಮುಖವಾಗಿವೆ. ಪ್ರೇಮಗೀತೆಗಳಲ್ಲಿ ಅರವತ್ತೊಂದು ಬಗೆಯ ಗೀತೆಗಳಿವೆ. ಇಲ್ಲಿಯ ನಾಯಕ ನಾಯಕಿಯರು ರಾಜರಾಣಿಯರಲ್ಲ. ಸಾಮಾನ್ಯರಲ್ಲಿ ಸಾಮಾನ್ಯರಾದ ಹೆಣ್ಣು ಗಂಡುಗಳು. ಇಲ್ಲಿರುವ ಉತ್ತಮ ಕಾವ್ಯಗುಣವೇ ರಸೋತ್ಪತ್ತಿಯಾಗಿದೆ. ಹೆಣ್ಣು ಗಂಡುಗಳ ಪರಸ್ಪರ ಆಕರ್ಷಣೆಯೇ ಜೀವಸೃಷ್ಟಿಯ ಮೂಲ ಸೂತ್ರವಾಗಿದ್ದು, ಪ್ರೇಮ ಕಾಮಗಳು ಒಂದು ನಾಣ್ಯದ ಎರಡು ಮುಖಗಳು ಎಂಬಂತೆ ಇಲ್ಲಿಯ ಗೀತೆಗಳಲ್ಲಿ ಅಭಿವ್ಯಕ್ತವಾಗಿವೆ.

ಚಾರಿತ್ರಿಕ ಗೀತೆಗಳ ಭಾಗದಲ್ಲಿ ಹದಿನೇಳು ಗೀತೆಗಳಿದ್ದು, ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದವುಗಳು ಹೆಚ್ಚಾಗಿವೆ. ಮದಕರಿನಾಯಕನಿಗೆ ಸಂಬಂಧಿಸಿದವು ಎಂಟು ಗೀತೆಗಳಿವೆ. ದುರ್ಗದ ನಾಯಕನಿಗೂ ತುರುಕರೊಡನೆ ಕಾದಾಡಿದ ನಾಯಕನಿಗೂ ಭಿನ್ನವಾದ ವ್ಯಕ್ತಿತ್ವವಿದ್ದು ಬೇರೆ ಬೇರೆ ವ್ಯಕ್ತಿಗಳಾಗಿ ಇಲ್ಲಿ ಕಾಣುತ್ತಾರೆ. ಮೈಸೂರು ಯುದ್ಧಕ್ಕೆ ಸಂಬಂಧಿಸಿದಂತೆ ಕುಂಪಣಿಯವರ ಆಕ್ರಮಣದಿಂದ ಸುಲ್ತಾನ ತನ್ನ ದೌಲತ್ತು ಕಳೆದುಕೊಳ್ಳುವ ಗೀತೆಯು ಪ್ರಮುಖವಾದುದಾಗಿದೆ. ಮೊಹರಂ ಹಬ್ಬದ ಆಚರಣೆಗೆ ಕಾರಣವಾಗಿರುವ ಹಜರತ್ ಹುಸೇನರ ಬಲಿದಾನವನ್ನು ಕುರಿತ 'ಹಸೇನ ಹುಸೇನ', 'ಸ್ವಾಮಿ ಹುಸೇನ' ಗೀತೆಗಳಿವೆ. ಬರಗಾಲದ ಕರಾಳ ದಿನಗಳನ್ನು ಎದುರಿಸುವಂತಹ, ರೈತರ ಕಣ್ಣೀರಿನ ಕಥೆಗಳನ್ನು ಹೇಳುವಂತಹ ಕ್ಷಾಮಗೀತೆಗಳು ಹತ್ತು ಇವೆ. ಮಕ್ಕಳನ್ನು ಮಾರಿ ಬದುಕುವಂತಹ ಪರಿಸ್ಥಿತಿ ಬಂದೊದಗಿದ ಸಂದರ್ಭವನ್ನು ಹೇಳುವಂತಹದೇ 'ಮಳೆಗಳು ಯಾಕ್ಹೋದವೋ' ಎಂಬ ಗೀತೆ.

ಸಂಕೀರ್ಣಗೀತೆಗಳು ಮೂವತ್ತಾರು ಇವೆ. ಇವುಗಳಲ್ಲಿ ನೀತಿಯನ್ನು ಹೇಳುವ, ಮೃಗ ಪಕ್ಷಿಗಳಿಗೆ ಸಂಬಂಧಿಸಿದ, ಪ್ರಕೃತಿ, ಸ್ಥಳದ ಐತಿಹ್ಯ, ಸಾವು, ಫರಂಗಿಯವರನ್ನು ಕುರಿತಿರುವ ಹಾಡು, ಕುಣಿಗಲುಕೆರೆ, ಜವರಾಯ ಮುಂತಾದ ವಸ್ತು ವೈವಿಧ್ಯತೆಯ ಹಲವಾರು ಗೀತೆಗಳು ಇವೆ.

ಎರಡನೆಯ ಭಾಗದಲ್ಲಿ ಎಪ್ಪತ್ತೆಂಟು ಬೀಸುವ ಪದಗಳಿವೆ. "ಬೀಸುವ ಕಲ್ಲು ಒಂದು ಮಹಾಯುಗದ ಸಂಕೇತ. ಆರ್ಷೇಯ ಸಮಾಜದಲ್ಲಿ ಬೀಸುವ ಕಲ್ಲಿನ ಉದಯು ಈ ಶತಮಾನದ ಅಣುಸ್ಫೋಟಕ್ಕಿಂತಲೂ ಹೆಚ್ಚಿನ ಕ್ರಾಂತಿಯನ್ನುಂಟುಮಾಡಿರಬಹುದು"

(ಪುಟ 257) ಎಂಬ ಮಾತು ಅರ್ಥಪೂರ್ಣವಾದುದು. ಏಕೆಂದರೆ ಇಂದು ಅಣು ನಾಗರಿಕ ಜಗತ್ತಿಗೆ ಎಷ್ಟು ಅವಶ್ಯಕವೋ ಹಾಗೆಯೇ ಹಿಂದೆ ಬದುಕಲು ರಾಗಿಕಲ್ಲು ಅಷ್ಟೇ ಅವಶ್ಯಕವಾಗಿತ್ತು. ಅದಿಲ್ಲದಿದ್ದರೆ ಜೀವನವೇ ಸಾಗುತ್ತಿರಲಿಲ್ಲ. ಜನಪದರಿಗೆ ರಾಗಿಕಲ್ಲು, ಒರಳು, ಒನಕೆಗಳು ಕೇವಲ ಜಡವಸ್ತುಗಳಾಗಿರದೆ ದೈವತ್ವವನ್ನು ಪಡೆದುಕೊಂಡಿದ್ದವು. ಇಂದೂ ಕೂಡ ಅವುಗಳನ್ನು ಉಪಯೋಗಿಸದಿದ್ದರೂ ಪೂಜಿಸುವ ಪದ್ಧತಿ ರೂಢಿಯಲ್ಲಿದೆ. ಇಲ್ಲಿರುವ ಬೀಸುವ ಪದಗಳು ದೇವರು, ಅಣ್ಣ ತಮ್ಮ, ತಂದೆ ತಾಯಿ, ತೌರು, ಜಾತ್ರೆ, ಯಾತ್ರೆ, ಚಂದ್ರ ಮುಂತಾದವರನ್ನು ಕುರಿತವುಗಳಾಗಿವೆ.

ಸಂಕಲನದ ಮೂರನೇ ಭಾಗದಲ್ಲಿ 49 ಸೋಬಾನೆ ಪದಗಳಿದ್ದು, ಅವುಗಳು ಸಾಮಾನ್ಯವಾಗಿ ಮದುವೆ, ಮುಂಜಿ, ಚೌಲ, ನಾಮಕರಣ, ಒಸಗೆ ಇತ್ಯಾದಿ ಸಂದರ್ಭಗಳಲ್ಲಿ ಹೇಳುವ ಗೀತೆಗಳಾಗಿವೆ. ಇಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ಹಾಡುಗಳೆಂದು ವಿಭಾಗಿಸಿದರೂ ಅಂತಹ ವ್ಯತ್ಯಾಸಗಳೇನೂ ಇಲ್ಲ. ಆದರೆ ಮುಂಜಿ, ಚೌಲಗಳು ಬ್ರಾಹ್ಮಣರಲ್ಲಿ ಮಾತ್ರ ಇರುವವುಗಳಾಗಿವೆ.

ನಾಲ್ಕು ಹಬ್ಬ ಎಂಬ ಭಾಗದಲ್ಲಿ ಬಲೀಂದ್ರನ ಪೂಜೆ, ಕೊಂತ್ಯಮ್ಮನ ಪೂಜೆ, ತಿಂಗಳು ಮಾವನ ಪೂಜೆ ಮತ್ತು ಬಸವನ ಅಷ್ಟಮಿ ಎಂಬ ನಾಲ್ಕು ಹಬ್ಬಗಳಿವೆ. ಪೂಜೆಗಳಿಗೆ ಸಂಬಂಧಿಸಿದಂತಹ 47 ಗೀತೆಗಳು ಇವೆ. ಭಾರತೀಯ ಸಮಾಜದಲ್ಲಿ ಪ್ರತಿಯೊಂದು ಹಬ್ಬಕ್ಕೂ ಒಂದು ಪರಂಪರಾಗತ ಪ್ರಾಮುಖ್ಯತೆ ಇರುತ್ತದೆ. ಅವುಗಳ ಮೂಲಕ ನಮ್ಮ ಜೀವನದ ಮೇಲೆ ಹಲವು ಸಾಮಾಜಿಕ, ಧಾರ್ಮಿಕ, ವೈಚಾರಿಕ, ಚಾರಿತ್ರಿಕ ಘಟನೆಗಳು ಪ್ರಭಾವಬೀರಿರುವುದನ್ನು ಈ ಹಬ್ಬಗಳಿಂದ ತಿಳಿಯಬಹುದು.

ಹಬ್ಬಗಳ ಆಚರಣೆಯಲ್ಲಿ ಬ್ರಾಹ್ಮಣೇತರರಿಗಿಂತ ಬ್ರಾಹ್ಮಣರು ಮುಂದು. ಬ್ರಾಹ್ಮಣರಲ್ಲಿ ಹಬ್ಬಗಳು ನಿತ್ಯಕರ್ಮದ ಅವಶೇಷದ ಸಂಕೇತವಾಗಿ ಉಳಿದು ಬಂದಿವೆ. ಇಂತಹ ಹಬ್ಬಗಳು ಬರಬರುತ್ತಾ ಧಾರ್ಮಿಕ ಹಿನ್ನೆಲೆಯನ್ನು ಕಳೆದುಕೊಂಡು ಆರ್ಥಿಕ ಹೊರೆಯಾಗಿ ಪರಿಣಮಿಸಿರುವುದರ ಬಗ್ಗೆ ಹಲವಾರು ಸಂದರ್ಭಗಳು ಈ ಗೀತೆಗಳಲ್ಲಿವೆ.

ಮಿಶ್ರಗೀತೆಗಳು ಭಾಗದಲ್ಲಿ ಒಂಬತ್ತು ಗೀತೆಗಳಿವೆ. ಚೋಮನ ಪದ, ಬಾಂದಿನವರ ಹಾಡು, ಹತ್ತಿಯ ಹಾಡು, ಪಾಂಗಿನ ಪದ ಮುಂತಾದವುಗಳಿವೆ. ಇವೆಲ್ಲ ಅಪರೂಪದ ಗೀತೆಗಳಾಗಿದ್ದು, ಬೇರೆಡೆಯಲ್ಲಿ ದೊರೆಯುವುದಿಲ್ಲ.

ಕಥನ ಗೀತೆಗಳು ಭಾಗದಲ್ಲಿ 44 ಗೀತೆಗಳಿವೆ. ಅವುಗಳನ್ನು ಪುರಾಣ ವ್ರತ ಕಥೆಗಳು, ರಾಮಾಯಣದ ಕಥೆಗಳು, ಕೃಷ್ಣನ ಬಾಲಲೀಲೆ, ಶಿವಕಥೆಗಳು, ಚಾರಿತ್ರಿಕ ಕಥೆಗಳು, ಸಾಮಾಜಿಕ ಕಥೆಗಳು, ಶಿವಶರಣೆ ಚನ್ನವ್ವ ಮತ್ತು ಭೀಮನ ಅಮಾವಾಸ್ಯೆ ಹಾಡು ಮುಂತಾಗಿ ವಿಭಾಗಿಸಿಕೊಂಡಿದ್ದಾರೆ. ಇಲ್ಲಿರುವ ಇಪ್ಪತ್ತೈದು ಗೀತೆಗಳ ವಕ್ತೃಗಳು ಬ್ರಾಹ್ಮಣರು. ಕಥೆಯ ಹೆಸರುಗಳನ್ನು ಕೇಳಿದ ಕೂಡಲೆ ಇವು ಜನಪದ ಗೀತೆಗಳೆ? ಎಂಬ ಅನುಮಾನ ಮೂಡುವುದು ಸಹಜ. ಇದೇ ಪ್ರಶ್ನೆ ಬರುತ್ತದೆಂದು ನಿರೀಕ್ಷಿಸಿ ಕೃಷ್ಣಮೂರ್ತಿಯವರೇ ಇದಕ್ಕೆ ಸ್ಪಷ್ಟನೆಯನ್ನೂ ನೀಡಿದ್ದಾರೆ. "ಇಂದಿನ ಸಮಾಜದಲ್ಲಿ ಹಾಡುಹೇಳುವವರ ಜಾತಿ ಆಧಾರದ ಮೇಲೆ ಒಂದು ಹಾಡನ್ನು ಜನಪದವೊ ಅಲ್ಲವೋ ಎಂದು ನಿರ್ಧರಿಸುವುದು ಸೂಕ್ತವೆನಿಸದು. ಪ್ರಸಿದ್ಧವಾಗಿರುವ ಜೋಗುಳದ ಈ ತ್ರಿಪದಿಗಳನ್ನು ಬ್ರಾಹ್ಮಣರು ಹೇಳುತ್ತಾರೆಂಬ ಕಾರಣದಿಂದ ಜಾನಪದವಲ್ಲ ಎಂದರೆ ಒಪ್ಪಲಾದೀತೆ?" (ಪುಟ 539). ಜನಪದ

ಸಾಹಿತ್ಯ ಯಾವುದೇ ಜಾತಿಗೆ ಮೀಸಲಾದುದಲ್ಲ. ಯಾರಲ್ಲಿ ಬೇಕಾದರೂ ಹುಟ್ಟಬಹುದು. ಆದರೆ ಹಳ್ಳಿಯವರಲ್ಲಿ ಹುಟ್ಟುವ ಸಾಹಿತ್ಯ ಇದು. (ಇತ್ತೀಚಿಗೆ ಪಟ್ಟಣದಲ್ಲಿಯೂ ಹುಟ್ಟುತ್ತದೆ). ಬ್ರಾಹ್ಮಣರೂ ಕೂಡಾ ಹಳ್ಳಿಯಲ್ಲಿ ವಾಸಿಸುತ್ತಿದ್ದರು. ಇಂದಿಗೂ ಇದ್ದಾರೆ. ಆದರೆ ಈಗಿರುವ ಬಹುಪಾಲು ಜನಪದ ಸಾಹಿತ್ಯ ಹಳ್ಳಿಯ ಶೂದ್ರಾತಿ ಶೂದ್ರರಲ್ಲಿ ಹುಟ್ಟಿರುವುದು ಸತ್ಯ ಸಂಗತಿ. ಆದರೆ ಇಲ್ಲಿ ಜಾತಿಗಿಂತ ವಸ್ತುವಿನ ದೃಷ್ಟಿಯಲ್ಲಿ ಅನುಮಾನ ಮೂಡುವುದು ಸಹಜವಾಗಿದೆ. "ಡಾ. ಗದ್ದಗಿಮಠರ 'ಕನ್ನಡ ಜಾನಪದ ಗೀತೆಗಳು' ಗ್ರಂಥದ ಅನುಬಂಧದಲ್ಲಿ ಕೊಟ್ಟಿರುವ ಶಿವಶರಣರ ಕಥನ ಗೀತೆಗಳನ್ನು, 'ಜೀವನ ಜೋಕಾಲಿ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿರುವ 'ಚೌಪದ' ಗಳನ್ನು ಜಾನಪದವೆಂದು ಒಪ್ಪಿಕೊಂಡು ಮೌನದಿಂದಿರುವ ವಿದ್ವಾಂಸರೇ ಬ್ರಾಹ್ಮಣರು ಹೇಳುವ ಹಾಡುಗಳನ್ನು ಕಂಡು ಕತ್ತುಕೊಂಕಿಸಿರುವುದು ಅಚ್ಚರಿ" (ಪುಟ 540) ಎಂದು ಸಮಜಾಯಿಸಿ ನೀಡಿದ್ದಾರೆ. ಒಂದು ಪ್ರಕಾರವನ್ನು ಒಮ್ಮೆ ಒಪ್ಪಿದ ಮೇಲೆ ವಿದ್ವಾಂಸರು ಎಲ್ಲೆಡೆಯೂ ಒಪ್ಪಬೇಕಾದುದು ಸಹಜವೇ ಆಗುತ್ತದೆ. ಇಲ್ಲಿರುವ ಗೀತೆಗಳನ್ನು ಜಾನಪದವೆಂದು ಒಪ್ಪುವುದರಲ್ಲಿ ಯಾವ ಅನುಮಾನವೂ ಬೇಡ.

ಸಾಮಾಜಿಕ ಕಥೆಯಾದ ಉತ್ತರದೇವಿಯ ಹಾಡು, ಚಾರಿತ್ರಿಕ ಕಥೆಗಳಲ್ಲಿ ಬರುವ ಲಕ್ಕಣ್ಣ–ಈರಣ್ಣ ಗೀತೆಗಳು ಜಾನಪದದ ಸಂದರ್ಭದಲ್ಲಿ ತುಂಬಾ ಮಹತ್ವಪೂರ್ಣವಾದವುಗಳಾಗಿವೆ. ಶಿವಶರಣೆ ಚನ್ನವ್ವನನ್ನು ಕುರಿತ ಕಥೆಯಂತು 850 ತ್ರಿಪದಿಗಳನ್ನೊಳಗೊಂಡ, 2550 ಸಾಲುಗಳ ಜನಪದ ಖಂಡಕಾವ್ಯ. ಇದನ್ನು ಕತ್ತಲುರಾಯನ ಕಥೆ, ಕಾಳಿಂಗರಾಯನ ಕಥೆ ಮುಂತಾಗಿಯೂ ಬೇರೆ ಬೇರೆ ಕಡೆಗಳಲ್ಲಿ ಕರೆಯುವುದುಂಟು.

ಗೃಹಿಣಿ ಗೀತೆಗಳು : ಮತಿಘಟ್ಟ ಕೃಷ್ಣಮೂರ್ತಿಯವರ, ಜಾನಪದದ ಸಂದರ್ಭದಲ್ಲಿ ಪ್ರಮುಖವಾಗಿ ದಾಖಲೆ ಆಗಲೇಬೇಕಾದ ಬೃಹತ್ ಕೃತಿಯೆಂದರೆ "ಕನ್ನಡ ಜನಪದ ಸಾಹಿತ್ಯ ಭಂಡಾರ ಸಂಪುಟ–೨ ಗೃಹಿಣೀ ಗೀತೆಗಳು". ಇದು 1982ರಲ್ಲಿ ಪ್ರಕಟವಾಗಿದೆ. 1179 ಪುಟಗಳ 515 ಗೀತೆಗಳನ್ನೊಳಗೊಡ ಕೃತಿ. ಈ ಕೃತಿಯ ಬಗ್ಗೆ ಸಾಲಿರಾಮಚಂದ್ರರಾಯರು ಅಭಿಪ್ರಾಯ ವ್ಯಕ್ತಪಡಿಸುತ್ತಾ "ವಿಶೇಷತ : ಸ್ತ್ರೀಯರು ಧರ್ಮವನ್ನು ಸುರಕ್ಷಿತವಾಗಿ ಉಳಿಸಲು ನಮ್ಮ ದೇಶದಲ್ಲಿ ತಮಗೇ ಗೊತ್ತಾಗದಂತೆ ಪ್ರಯತ್ನಿಸಿರುವರು" (ಪುಟ 17) ಎಂದಿದ್ದಾರೆ. ಧರ್ಮದ ರಕ್ಷಣೆಯಲ್ಲಿ ಯಾವಾಗಲೂ ಸ್ತ್ರೀ ಮುಂದು. ಆದರೆ ನಮ್ಮ ಧರ್ಮಗ್ರಂಥಗಳು ಸ್ತ್ರೀಯರನ್ನು ಕೀಳುದರ್ಜೆಯಲ್ಲಿ ಕಡೆಗಣಿಸಿರುವುದನ್ನು ಆದಿಯಿಂದಲೂ ಕಾಣಬಹುದು. "ನಮ್ಮ ಹಿರಿಯರು ಕೇಳುತ್ತಿದ್ದ ಹಾಡುಗಳನ್ನು, ನಮ್ಮ ಸ್ತ್ರೀಯರು ಈಗ ಹಾಡುತ್ತಿರುವುದನ್ನು ನಾವು ಕೇಳುತ್ತಿಲ್ಲ. ಇದೇ ಬಗೆಯಾಗಿ ನಡೆದರೆ ನಮ್ಮ ಸಂಸ್ಕೃತಿಯ ವಿಕಾಸಕ್ಕೆ ದೊಡ್ಡದೊಂದು ವಿಘ್ನ ಉಂಟಾಗುತ್ತದೆ" (ಪುಟ 18) ಎಂದು ಸಾಲಿರಾಮಚಂದ್ರರಾಯರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಆಲೂರು ವೆಂಕಟರಾಯರು ಸಹ ಕೃತಿಯ ಬಗ್ಗೆ ಹೇಳುತ್ತಾ "ನಮ್ಮ ಹೆಣ್ಣು ಮಕ್ಕಳ ಪುರಾತನ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವುದು ನಾವೆಲ್ಲರೂ ಅವಶ್ಯಕವಾಗಿ ಮಾಡತಕ್ಕ ಕಾರ್ಯ" (ಪುಟ 19) ಎಂದಿದಾರೆ. ಜನಪದ ಸಂಸ್ಕೃತಿ ಮೂಲತಃ ಹೆಣ್ಣು ಮಕ್ಕಳ ಸಂಸ್ಕೃತಿಯಾಗಿದ್ದು, ಅದನ್ನು ಉಳಿಸಿ ಬೆಳೆಸುವವರು ಹೆಣ್ಣು ಮಕ್ಕಳೇ ಎಂಬುದು ಇದರಿಂದ ತಿಳಿಯುತ್ತದೆ. ಈ ಎಲ್ಲರ ಮಾತುಗಳನ್ನು ಇಲ್ಲಿ ದಾಖಲಿಸಿರುವುದು ಈ ಕೃತಿಯ ಶ್ರೇಷ್ಠತೆಯನ್ನು ತೋರ್ಪಡಿಸುವುದಕ್ಕಾಗಿ.

ಈ ಕೃತಿಯಲ್ಲಿರುವ ಗೀತೆಗಳು ಸಾಮಾನ್ಯ ಜನರ ಹಾಡಿಗಿಂತ ಮೇಲೆ ಮತ್ತು ದಾಸಸಾಹಿತ್ಯಕ್ಕಿಂತ ಸ್ವಲ್ಪ ಕೆಳಗೆ, ಒಂದು ಮಧ್ಯದ ಸಾಹಿತ್ಯ ನೆಲೆಯಾಗಿ ಕಂಡುಬರುತ್ತವೆ. ಜನಸಾಮಾನ್ಯರು ಅವಿದ್ಯಾವಂತರು. ದಾಸ ಸಾಹಿತ್ಯ ರಚಿಸಿದವರು ವಿದ್ಯಾವಂತ ದಾರ್ಶನಿಕರು. ಇವರ ಮಧ್ಯೆ ಅರೆವಿದ್ಯಾವಂತ ಬ್ರಾಹ್ಮಣ ಹೆಣ್ಣು ಮಕ್ಕಳು ಮತ್ತು ಮೇಲು ಮಧ್ಯಮ ವರ್ಗದವರ ಹಾಡುಗಳು ಇಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಉದಾಹರಣೆಗೆ ನಾರಾಯಣ ಸ್ತೋತ್ರ, ದತ್ತಾತ್ರೇಯ ಸ್ತೋತ್ರ, ತುಳಸಿ ಮಹಾತ್ಮೆ, ತುಳಸಿ ಧವಳ, ತುಳಸೀದೇವಿ ಬಾರೆ ನೀನು, ತುಳಸೀ ಯಾತ್ರೆ, ಕಪಿಲಾಸ್ತೋತ್ರ, ವೃಂದಾವನ ಸೇವೆ, ಸಾಲಿಗ್ರಾಮದ ಮಹಿಮೆ, ಆದಿಶಕ್ತಿಯ ಸ್ತೋತ್ರ, ತಾವರೆಗಂಧಿನಿ, ದೇವಿ ಪೂಜೆ, ಲಲಿತ ಕಲ್ಪೋಕ್ತಪೂಜೆ, ಲಕ್ಷ್ಮೀಪೂಜೆ, ಕಾಶಿವಿಶ್ವೇಶ್ವರನ ಅಭಿಷೇಕ, ಅಶ್ವತ್ಥಪೂಜೆ, ಮಾಗದ ಗೌರಿ, ಚೈತ್ರದ ಗೌರಿ ಹೀಗೆ ಬಹುತೇಕವಾಗಿ ಇಲ್ಲಿರುವ ಹಾಡುಗಳು ಸಾಮಾನ್ಯ ಜನಪದರಿಂದ ಮೇಲೇರಿದ ತಮ್ಮದೇ ಆದಂತಹ ತಾತ್ವಿಕ ನೆಲೆಯನ್ನು ಹೊಂದಿದವರ ಹಾಡುಗಳಾಗಿವೆ.

ಮತಿಘಟ್ಟ ಕೃಷ್ಣಮೂರ್ತಿಯವರ ಸಂಗ್ರಹದ ವಿಶೇಷತೆಯನ್ನು ಎರಡು ನೆಲೆಯಿಂದ ಗಮನಿಸಬಹುದಾಗಿದೆ.

1. ಸಾಮಾನ್ಯರಲ್ಲಿ ಸಾಮಾನ್ಯನೆಂಬ ಜನಪದರಿಂದ ಸಂಗ್ರಹಿಸಿದುದು.

2. ತಮ್ಮದೇ ಬ್ರಾಹ್ಮಣ ವರ್ಗದಲ್ಲಿಯ ವಿಶಿಷ್ಟೀಕರಿಸಲ್ಪಟ್ಟ ಜಾನಪದವನ್ನು ಸಂಗ್ರಹಿಸಿದುದು.

ಇವತ್ತಿನ ಜಾನಪದ ಅಧ್ಯಯನಕ್ಕೆ ಇದೊಂದು ಒಳ್ಳೆಯ ಆಸಕ್ತಿದಾಯಕ ಕೊಡುಗೆ. ಭಾರತದ ಆರಂಭಿಕ ಜಾನಪದ ವಿದ್ವಾಂಸರು

ಜಾನಪದ ಎಂಬುದು ಕೆಳವರ್ಗದ ಸಂಪತ್ತು ಮಾತ್ರ, ಮೇಲುವರ್ಗದಲ್ಲಿ ಜಾನಪದ ಇಲ್ಲ, ಅಲ್ಲಿರುವುದೆಲ್ಲ ಶಿಷ್ಟ ಎಂಬ ಸಾರಾಸಗಟು ಆಲೋಚನೆಯನ್ನು ಮಂಡಿಸಿದ್ದರು. ಇವತ್ತಿಗೂ ಬಹುಜನ ವಿದ್ವಾಂಸರು ಇದೇ ಅಭಿಪ್ರಾಯವನ್ನು ಉಳ್ಳವರಾಗಿದ್ದಾರೆ. ಕರ್ನಾಟಕದಲ್ಲಿ ಜಾನಪದ ಅಧ್ಯಯನ ವೈಜ್ಞಾನಿಕ ಮಾತ್ರವಲ್ಲದೆ, ವೈಚಾರಿಕ ಹಿನ್ನೆಲೆಯಲ್ಲಿ ಆರಂಭವಾದಾಗ ಜಾನಪದವನ್ನು ಜಾತಿವರ್ಗ ಸೀಮಿತತೆಯಲ್ಲಿ ಅಧ್ಯಯನ ಮಾಡದೆ, ಅದನ್ನೊಂದು ಸರ್ವವ್ಯಾಪಿ ಮನೋಧರ್ಮವಾಗಿ ಅಧ್ಯಯನ ಮಾಡುವ ಅಗತ್ಯವನ್ನು ಒತ್ತಿ ಹೇಳಲಾಯಿತು. ಈ ಬಗೆಯ ಚಿಂತನೆಯನ್ನು ಚಂದ್ರಶೇಖರ ಕಂಬಾರ, ಬಿ.ಎ. ವಿವೇಕ ರೈ, ಹಿ.ಶಿ. ರಾಮಚಂದ್ರೇಗೌಡ, ಪುರುಷೋತ್ತಮ ಬಿಳಿಮಲೆ, ಟಿ.ಎಸ್. ಸತ್ಯನಾಥ, ಪ್ರೊ. ಡಿ. ಲಿಂಗಯ್ಯ, ಮುಂತಾದವರು ಬೆಳೆಸಿದರು. ಒಂದು ಪ್ರದೇಶದ ಅಥವಾ ದೇಶದ ಜಾನಪದವನ್ನು ಸಮಗ್ರವಾಗಿ ಕುರಿತು ಮಾತನಾಡಬೇಕಾದರೆ ಈ ಬಗೆಯ ವಿಸ್ತೃತ ಆಲೋಚನಾ ಕ್ರಮ ಅಗತ್ಯವಾಗುತ್ತದೆ. ಈ ಬಗೆಯ ಅಧ್ಯಯನದಿಂದ ಇನ್ನೊಂದು ಉಪಯೋಗ ಉಂಟು. ಅದೇನೆಂದರೆ ಒಂದು ಪ್ರದೇಶದ, ದೇಶದ ಭಿನ್ನ ಆಲೋಚನೆಗಳನ್ನು ಗುರುತಿಸಿಕೊಳ್ಳುವುದು. ಈ ಹಿನ್ನೆಲೆಯಿಂದ ನೋಡಿದಾಗ ಮತಿಘಟ್ಟ ಕೃಷ್ಣಮೂರ್ತಿಯವರ ಈ ಕೃತಿ ಅತ್ಯಂತ ಮುಖ್ಯ ದಾಖಲೆಯಾಗಿ ಕಾಣುತ್ತದೆ.

ಮತಿಘಟ್ಟ ಕೃಷ್ಣಮೂರ್ತಿಯವರು ಭಾರತದ ಜಾನಪದಕ್ಕಿಂತ ಭಾರತದ ಸಂಸ್ಕೃತಿಪರ ಜೀವನದ ಕಡೆ ಹೆಚ್ಚು ಆಸಕ್ತಿ ಉಳ್ಳವರು. ಹಿಂದೂ ಧರ್ಮದ ತಾತ್ವಿಕತೆಯನ್ನು ಸಾಮಾನ್ಯ ಜನರಲ್ಲಿಯೂ ಕಾಣಹೊರಟವರು. ಅದರಿಂದಾಗಿ ಜಾನಪದವನ್ನು ಹೊರಗೆ ಮಾತ್ರ

ಹುಡುಕದೆ ತಮ್ಮ ಸಮುದಾಯದಲ್ಲಿಯೇ ಇರುವ ಸಾಮಾನ್ಯರಲ್ಲಿ ಸಾಮಾನ್ಯರಾದ ಸ್ತ್ರೀಯರ ಜಾನಪದವಾದ ಸಂಪ್ರದಾಯದ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಇದರಿಂದ ಜಾನಪದವನ್ನು ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಹೊರಟಾಗ ಆಗುವ ಲಾಭಗಳು ಏನು ಎಂಬುದನ್ನು ಪರೋಕ್ಷವಾಗಿ ತೋರಿಸಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಈ ಕೃತಿ ಬಹಳ ಮುಖ್ಯವಾಗುತ್ತದೆ.

ಎರಡನೆಯ ಮಹಾಯುದ್ಧದ ಅನಂತರ ಹಳ್ಳಿಗಳ ಆರ್ಥಿಕ, ಸಾಮಾಜಿಕ ಹಾಗು ಸಾಂಸ್ಕೃತಿಕ ನೆಲಗಟ್ಟೇ ಅಲ್ಲಾಡಿ ಬದುಕು ಉಲ್ಲೋಲ ಕಲ್ಲೋಲವಾಯಿತು. ಅಂತಹ ಸಂದರ್ಭದಲ್ಲಿ ವಸಾಹತೀಕರಣ ಜಾನಪದವನ್ನು ಅರಿಯತೊಡಗಿತು. ಏಕೆಂದರೆ ವರ್ತಮಾನದ ಕಷ್ಟವನ್ನು ಗೆಲ್ಲಲು ಭೂತಕಾಲದ ಭವ್ಯ ಮೌಲ್ಯಗಳನ್ನು ಎತ್ತಿಹಿಡಿಯಹೊರಟಿದ್ದು ಜಾನಪದದ ಆರಂಭಿಕ ತತ್ವ ಚಿಂತನೆಯಲ್ಲಿ ಒಂದು ಅಂಶವಾಯಿತು. ಆದರೆ ಬರಬರುತ್ತಾ ಶಿಷ್ಟರು ಅಶಿಷ್ಟರು ಎನ್ನದೆ ತಮ್ಮೊಳಗಿನ ಜಾನಪದವನ್ನು ಕಂಡುಕೊಳ್ಳಲು ಹೊರಟಿದ್ದು ಬಹಳ ಮುಖ್ಯವಾದ ಸಂಗತಿ. ಜಾನಪದದ ಅಧ್ಯಯನದ ಉದಯಕ್ಕೆ ಮೊದಲು ಸೃಷ್ಟೀಕರಣ ಪ್ರಕ್ರಿಯೆಯಲ್ಲಿದ್ದ ಸಮಾಜ, ಶಿಷ್ಟವಾಗಲು ಬೇಕಾದ "ವಿಶಿಷ್ಟವನ್ನು ಹುಡುಕಿ ಹೊರಟಿತ್ತು". ಜಾನಪದದ ತಿಳಿವಳಿಕೆಯ ಉದಯದೊಂದಿಗೆ ಈ ಶಿಷ್ಟ ಸಮಾಜಗಳು ತಮ್ಮಲ್ಲಿರುವ ಜಾನಪದವೆಂಬ ವಿಶಿಷ್ಟವನ್ನು ಹುಡುಕಿಕೊಂಡ ಪ್ರಯತ್ನ ಸಾಂಸ್ಕೃತಿಕ ಬದಲಾವಣೆಯಲ್ಲಿಯ ಒಂದು ಅದ್ಭುತ ಸಾಧನೆ ಎಂದೇ ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಕೃತಿಯು ವೈಶಿಷ್ಟಪೂರ್ಣವಾದುದಾಗಿದೆ.

ಮತಿಘಟ್ಟ ಕೃಷ್ಣಮೂರ್ತಿಯವರ ಆಲೋಚನೆಯನ್ನು ಗಮನಿಸಿದಾಗ ಅವರು ಯಜಮಾನ ಸಂಸ್ಕೃತಿಯ ಆಲೋಚನೆಯಿಂದ ಜನಸಂಸ್ಕೃತಿಯ ಕಡೆಗೆ ಚಲಿಸುತ್ತಾರೆ ಎಂಬುದು ವೈದ್ಯವಾಗುತ್ತದೆ.

ಈ ಸಂಗ್ರಹದ ಆರಂಭದಲ್ಲಿ ಜಾನಪದಕ್ಕೆ ಬ್ರಾಹ್ಮಣರ ಕೊಡುಗೆಯ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಛಂದಸ್ಸಿನ ಬಗ್ಗೆ ಪೂರ್ಣ ಮಾಹಿತಿ ನೀಡಿ, ಛಂದಸ್ಸಿನ ಹೊಸದೃಷ್ಟಿಯ ಅಗತ್ಯವನ್ನು ಹೇಳಿದ್ದಾರೆ. ಇಲ್ಲಿರುವ ಗೀತೆಗಳೆಲ್ಲವೂ ಅಂಶಗಣಗಳಲ್ಲಿವೆ. ಹಾಡಿದಾಗ ಲಘು, ಗುರುಗಳಲ್ಲಿ ವ್ಯತ್ಯಾಸವುಂಟಾಗುತ್ತದೆ. ಆದ್ದರಿಂದ ಅಂಶಗಣಗಳ ಗತಿಯನ್ನು ನಿರ್ದಿಷ್ಟವಾಗಿ ಗೊತ್ತುಮಾಡಬೇಕಾದರೆ ಹೊಸ ದೃಷ್ಟಿ ಅಗತ್ಯ. ದನಿ ಧಾಟಿಗಳನ್ನು ಧ್ವನಿ ಮುದ್ರಣ ಮಾಡಿಕೊಂಡು, ಧ್ವನಿಘಟಕಗಳ ಕಾಲಪ್ರಮಾಣವನ್ನು ಅಳೆದು “ಅಂಶ”ಗಳನ್ನು ಎಣಿಸುವ ಸೂಕ್ಷ್ಮ ಕ್ರಮವನ್ನು ಅನುಸರಿಸಬೇಕು. ಒಂದು ಸೆಕೆಂಡ್‌ನಷ್ಟು ಕಾಲವನ್ನು ನೂರು ಭಾಗ ಮಾಡಿ ತೋರಿಸುವಂಥ ಸೂಕ್ಷ್ಮಕಾಲಮಾಪನ ಯಂತ್ರಗಳ ಸಹಾಯದಿಂದ ಧ್ವನಿವಿಜ್ಞಾನದಲ್ಲಿ ಪರಿಣತರಾದವರು ಮಾಡಬೇಕು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.

ಹಿಂದೂ ವಿಚಾರ ವಾಹಿನಿಯ ಜೊತೆಗೆ ವೇದಗಳು, ಯಜ್ಞಗಳು, ಋಗ್ವೇದದ ಋಷಿಗಳು, ದೇವತೆಗಳು. ಸಾಮವೇದ, ಅಥರ್ವವೇದ, ಭಗವದ್ಗೀತೆ, ಧರ್ಮಸೂತ್ರಗಳು, ಪುರಾಣಗಳು, ಆಗಮಗಳು, ದರ್ಶನ ಮುಂತಾದವುಗಳನ್ನು; ಹಿಂದೂ ಮತ ದರ್ಶನಗಳು ಎಂಬಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳ ವಿವರಣೆಯನ್ನು ಕೊಟ್ಟಿದ್ದಾರೆ. ಇದು ಜಾನಪದವನ್ನು ಬ್ರಾಹ್ಮಣ ಜಾನಪದದೊಂದಿಗೆ ಸಮೀಕರಿಸುವ ಮತ್ತು ಒಂದಕ್ಕೊಂದು ಸಂಬಂಧಗಳ ಜೋಡಣೆಯ ಕೆಲಸವಾಗಿದೆ.

ಈ ಕೃತಿಯಲ್ಲಿರುವ ಹಲವಾರು ಹಾಡುಗಳು ಆತ್ಮ ಬೋಧನೆಯವಾಗಿದ್ದು, ಚಿಕ್ಕವರಿಗೆ ಬೋಧಪ್ರದವಾದರೆ, ದೊಡ್ಡವರಿಗೆ ಜ್ಞಾನಪ್ರದವಾದವುಗಳಾಗಿವೆ. ಆದರೆ ಇಲ್ಲಿಯ ಕೆಲವು ಹಾಡುಗಳಲ್ಲಿ ಪುರಂದರ, ಕನಕದಾಸರ ಅಂಕಿತವೂ ಕೂಡ ಇರುವುದು ವಿಶೇಷವಾಗಿಯೇ ಇವೆ. ಇವು ಜಾನಪದವೇ ಎಂಬ ಅನುಮಾನವು ಮೂಡುತ್ತದೆ. "ಕೆಲವು ಮಹಿಳೆಯರು ಮುದ್ರಿಕೆಯಿಲ್ಲದ ಹಾಡುಗಳನ್ನು ಹಾಡಬಾರದೆಂಬ ಶ್ರದ್ಧೆ ಹೊಂದಿರುತ್ತಾರೆ. ಅಂಕಿತವಿಲ್ಲದ ಯಾವುದಾದರೊಂದು ಹಾಡು ಅವರಿಗೆ ಮೆಚ್ಚಿಕೆಯಾದಾಗ, ಆ ಹಾಡಿಗೆ ಅವರು ಪ್ರಸಿದ್ಧವಾದ ಯಾವುದಾದರೊಂದು ಅಂಕಿತವನ್ನು ಸೇರಿಸಿ ಹಾಡುವ ಸಂಭವವೂ ಉಂಟು. ಹಾಗೆಯೇ ಅಂಕಿತವುಳ್ಳ ಹಾಡೊಂದು ಬಾಯಿಂದ ಬಾಯಿಗೆ ಹರಿದು ಬರುವಾಗ ಅಂಕಿತವು ಬದಲಾಗುವ ಅಥವಾ ಬಿಟ್ಟುಹೋಗುವ ಸಂಭವವೂ ಇರುತ್ತದೆ. ಕೆಲವು ಮಹಿಳೆಯರು ತಾವೇ ರಚಿಸಿದ ಹಾಡುಗಳಿಗೆ ಪ್ರಸಿದ್ಧರಾದ ದಾಸವರೇಣ್ಯರೊಬ್ಬರ ಅಂಕಿತ ಹಾಕಿಬಿಡುತ್ತಾರೆ. ಈ ಕಾರಣದಿಂದಾಗಿ ಸಂಪ್ರದಾಯದ ಹಾಡುಗಳಲ್ಲಿ ಕಂಡುಬರುವ ಅಂಕಿತಗಳ ಬಗ್ಗೆ ಕೆಲ ಮಟ್ಟಿನ ಗೊಂದಲವಿದೆ" (ಪುಟ 101) ಎಂದು ಸ್ಪಷ್ಟೀಕರಣ ನೀಡಿದ್ದಾರೆ. ಇದನ್ನು ಅಧ್ಯಯನದಿಂದ ದಾಸರ ಹಾಡುಗಳೇ ಅಥವಾ ಮೂಲ ಜಾನಪದವೇ ಎಂಬುದನ್ನು ನಿರ್ಧರಿಸಲು ಸಾಧ್ಯವಿದೆ.

ಉದಯರಾಗಗಳು ವಿಭಾಗದಲ್ಲಿ ನೆಲೆ–೧ ರಲ್ಲಿ 16 ಹಾಡುಗಳಿದ್ದು 5 ಮತ್ತು 14ನೇ ಹಾಡಿನಲ್ಲಿ ಶ್ರೀನಿವಾಸ ರಂಗಯ್ಯ, ನೆಲೆಯಾದಿ ಕೇಶವ ಎಂಬ ಅಂಕಿತಗಳಿವೆ. ಇಲ್ಲಿಯ ಹಾಡುಗಳನ್ನು ಅಜ್ಜಿಯರು ಹಾಡಿದ್ದಾರೆ. 'ಪೂರ್ವಾರ್ಜಿತ' ಎನ್ನುವ ಹಾಡು ಮಾತ್ರ ಇಲ್ಲಿ ಗಮನಾರ್ಹವಾದುದಾಗಿದೆ.

ನೆಲೆ–೨ ರಲ್ಲಿಯ 'ಮನೆವಾಳ್ತೆ' ಹಾಡುಗಳನ್ನು ಸೊಸೆಯರು ಮನೆಕೆಲಸ ನಿರ್ವಹಿಸುತ್ತಿದ್ದ ನಿತ್ಯಕರ್ಮಗಳ ಸೂಕ್ಷ್ಮ ಪರಿಚಯ ಇದೆ. ನೆಲೆ–೩ ರಲ್ಲಿ ಬ್ರಾಹ್ಮಣ ಗೃಹಿಣಿಯರು ನಿತ್ಯಧರ್ಮವಾಗಿ ಮಾಡುವ ಕೆಲವು ದೇವತಾ ಪ್ರಾರ್ಥನೆಗಳು, ಹಿಂದೂ ಸಮಾಜದಲ್ಲಿ ಬ್ರಾಹ್ಮಣರ ಸ್ಥಾನಮಾನಗಳನ್ನು, ಅವರು ನಿರ್ವಹಿಸಬೇಕಾದ ಕರ್ತವ್ಯಗಳು, ಹಿಂದೂ ಸಮಾಜದ ವರ್ಣಾಶ್ರಮ ವ್ಯವಸ್ಥೆ, ಬ್ರಾಹ್ಮಣರಲ್ಲಿರಬೇಕಾದ ಗುಣಶೀಲಗಳು ಮತ್ತು ಪುರುಷಾರ್ಥಗಳ ಬಗೆಗಿನ ಹಾಡುಗಳು ಇವೆ. ನೆಲೆ–೪ ರಲ್ಲಿ ವಿವಿಧ ಪೂಜೆಗೆ ಸಂಬಂಧಿಸಿದ ಹಾಡುಗಳಿದ್ದರೆ, ನೆಲೆ–೫ ರಲ್ಲಿ ವ್ರತಕ್ಕೆ ಸಂಬಂಧಿಸಿದ ಸ್ನಾನ, ಉಪವಾಸ, ಪೂಜೆ, ಪ್ರಾರ್ಥನೆ, ವ್ರತಗಳಲ್ಲಿರುವ ನಿತ್ಯವ್ರತ, ನೈಮಿತ್ತಿಕ ವ್ರತ ಮತ್ತು ಕಾಮ್ಯವ್ರತಗಳ ಬಗೆಗಿನ ಹಾಡುಗಳುಂಟು. ನೆಲೆ–೬ ರಲ್ಲಿ ಪೌರಾಣಿಕ ಕಥೆಗಳಿಗೆ ಸಂಬಂಧಿಸಿದ ರಾಮ, ಕೃಷ್ಣ ಮುಂತಾದವರ ಬಗೆಗಿನ ಹಾಡುಗಳಿವೆ. ಈ ಭಾಗದಲ್ಲಿ ಎಂಟು ಲೌಕಿಕ ಕಥೆಗಳಿದ್ದು ದಿನಾಂಕ 28–2–1867ರಲ್ಲಿ ಮೈಸೂರು ಅರಮನೆಗೆ ಬೆಂಕಿಬಿದ್ದ ಪ್ರಸಂಗವು ಐತಿಹಾಸಿಕ ಗೀತೆಯಾಗಿ ದಾಖಲಾಗಿದೆ. ರೈಲಿನ ಹಾಡು, ನಲ್ಲಿಯ ಹಾಡು, ಜಮಾಬಂದಿ ಹಾಡುಗಳು ವಿಶೇಷವಾಗಿವೆ. ನೆಲೆ–೭ ರಲ್ಲಿ ಸತಿಪತಿಯರು ಹೇಗಿರಬೇಕು ಎಂಬುದನ್ನು, ವೇದ, ಮನಶ್ಶಾಸ್ತ್ರಗಳನ್ನು ಆಧರಿಸಿ ಹೇಳಿದ ಹಾಡುಗಳಿವೆ. ನೆಲೆ–೮ ರಲ್ಲಿ ಚೌಲ–ಮುಂಜಿಗಳಿಗೆ ಸಂಬಂಧಿಸಿದ, ಮದುವೆ, ನಾಮಕರಣಕ್ಕೆ ಹಾಡುವ ಹಾಡುಗಳಿವೆ. ನೆಲೆ–೯ ರಲ್ಲಿ ಜೋಗುಳದ ಹಾಡುಗಳಿದ್ದರೆ, ನೆಲೆ–೧೦ ರಲ್ಲಿ ಆಧ್ಯಾತ್ಮ–ಆರತಿ–ಮಂಗಳ ಕಾರ್ಯಗಳಲ್ಲಿ ಹಾಡುವ ಹಾಡುಗಳಿವೆ. ಕೃತಿಯ ಕೊನೆಯಲ್ಲಿ ಪರಿಶಿಷ್ಟ ಕೊಟ್ಟಿದ್ದು, ಅದರಲ್ಲಿ ದಶಾವತಾರದ ಕಥೆಗಳು ಹಾಗೂ ಶಿವಕಥೆಗಳು ವಿಶಿಷ್ಟವಾಗಿ ಇವೆ.

ಹೊನ್ನಹೊತ್ತಿಗೆ : ಮತಿಘಟ್ಟ ಕೃಷ್ಣಮೂರ್ತಿಯವರ ಮತ್ತೊಂದು ಕೃತಿ "ಹೊನ್ನ ಹೊತ್ತಿಗೆ". ಇದರ ಹೆಸರೇ ಸೂಚಿಸುವಂತೆ ಜನಪದ ಸಾಹಿತ್ಯವನ್ನು ಹೊಂದಿರುವ ಸಂಕಲನ ಇದು. ಇದರಲ್ಲಿ ಇವರ 'ಗೀತೆಗಳು' ಸಂಕಲನದಿಂದ ಆಯ್ದು ಜನಪದ ಗೀತೆಗಳಿದ್ದು ಅವೆಲ್ಲವೂ ಅತ್ಯುತ್ತಮವಾದವುಗಳಾಗಿವೆ; ವೈವಿಧ್ಯಮಯವಾದವುಗಳಾಗಿವೆ. ಇಲ್ಲಿರುವ ನೂರಕ್ಕೂ ಹೆಚ್ಚು ಗೀತೆಗಳನ್ನು ಹಲವು ಮಂದಿ ಗಾಯಕರು ಧ್ವನಿಸುರುಳಿ ಹಾಗೂ ಆಕಾಶವಾಣಿ, ದೂರದರ್ಶನಗಳಲ್ಲಿ ಹಾಡಿದ್ದಾರೆ. ಇದೊಂದು ಅತ್ಯಂತ ಜನಪ್ರಿಯ ಗೀತೆಗಳ ಸಂಕಲವಾಗಿದೆ. ಇದರಲ್ಲಿ ಕೋಲು ಪದಗಳು 120, ಬೀಸುವ ಪದಗಳು 42, ಒಸಗೆ ಮತ್ತು ಸೋಬಾನೆ ಪದಗಳು 42, ನಾಲ್ಕು ಹಬ್ಬಗಳು ಎಂಬಲ್ಲಿ 7 ಗೀತೆಗಳು, ಬಸವನ ಪೂಜೆ ಹಾಡುಗಳು 11, ತಿಂಗಳ ಮಾವನ ಪೂಜೆ ಹಾಡುಗಳು 8 ಮತ್ತು ಕೊಂತ್ಯಮ್ಮನ ಪೂಜೆ ಬಗ್ಗೆ 7 ಗೀತೆಗಳು ಇವೆ.

ಕಿರು ಲಾವಣಿಗಳು : ಇವರ ಮತ್ತೊಂದು ಕೃತಿ "ಕಿರು ಲಾವಣಿಗಳು" ಎಂಬುದರಲ್ಲಿ 63 ವೈವಿಧ್ಯಮಯವಾದ ಲಾವಣಿಗಳಿವೆ. 1950 ರಲ್ಲಿ ಮೈಸೂರಿನ ಪೈಲ್ವಾನರ ಮನೆಯ ಕಡತದಲ್ಲಿದ್ದವುಗಳನ್ನು ಬರೆದುಕೊಂಡು ಪ್ರಕಟಿಸಿದ್ದಾರೆ. ಇವು ಗರಡಿ ಮನೆಯ ಪೈಲ್ವಾನರು ರಚಿಸಿರುವವರೆಂಬುದು ಸವಾಲ್––ಜವಾಬು ಎಂಬ ಲಾವಣಿಯಲ್ಲಿ ಬರುವ ಹಲವಾರು ಹೆಸರುಗಳಿಂದ ತಿಳಿಯುತ್ತದೆ. ಆದಿಶಕ್ತಿ, ತತ್ವವಿಚಾರ, ಕಾಲವನ್ನು ಕುರಿತ ಮೂರು ಮುಖದ ಪಕ್ಷಿ, ಸೂರ್ಯನನ್ನು ಕುರಿತ ಗೀತೆ, ಜಾರೆಯ ಬಗ್ಗೆ, ಕೃಷ್ಣರಾಜನನ್ನು ಕುರಿತ ಹಾಡು, ಸರ್ಜಪ್ಪನಾಯಕನನ್ನು ಕುರಿತದ್ದು, ಸುರಪುರ, ಚಿತ್ತೂರು ಯುದ್ಧದ ವರ್ಣನೆ, ಬೆಂಗಳೂರು, ಸಿಂಹಾಸನ ಪುರಿ ವರ್ಣನೆ, ಮೀನಿನ ಲಾವಣಿ ಮುಂತಾದ ಲಾವಣಿಗಳಿದ್ದು

ಇದೊಂದು ವೈಶಿಷ್ಟ್ಯ ಪೂರ್ಣ ವಿಚಾರಗಳನ್ನು ತಿಳಿಸುವ ಕೃತಿಯಾಗಿದೆ.

ಹಾಸನ ಜಿಲ್ಲೆಯ ಕೋಲಾಟದ ಪದಗಳು : "ಹಾಸನ ಜಿಲ್ಲೆಯ ಕೋಲಾಟದ ಪದಗಳು" ಕೃತಿಯಲ್ಲಿ 80 ಕೋಲಾಟದ ಪದಗಳಿದ್ದು, ಅವುಗಳನ್ನು ಚನ್ನರಾಯಪಟ್ಟಣದವರಾದ ರಂಗೇಗೌಡ ಮತ್ತು ನಂಜೇಗೌಡ ಎಂಬುವರಿಂದ 1952 ರಲ್ಲಿ ಸಂಗ್ರಹಿಸಿ 2002ರಲ್ಲಿ ಪ್ರಕಟಿಸಿದ್ದಾರೆ. ಇಲ್ಲಿಯ ಗೀತೆಗಳು ವಿವಿಧ ಭಿನ್ನತೆಗಳಿಂದ ಕೂಡಿದ್ದು, ಹಾಸನ ಜಿಲ್ಲೆಯ ಸಾಂಸ್ಕೃತಿಕ ಒಳನೋಟಗಳನ್ನು ಒಳಗೊಂಡವುಗಳಾಗಿವೆ. ಸಂಪಾದಕರು ಪ್ರತಿ ಕೋಲಾಟದ ಪದವು ಯಾವ ಬಗೆಯದು ಎಂಬುದರ ವಿವರಣೆಯನ್ನು ಕೊಟ್ಟಿದ್ದಾರೆ. 'ಗಾಡಿ ಗಾಡಿ ಗಾಡಿ ಮೆಲಾಡಿ' ಎಂಬುದು ರೈಲು ಬಂದದ್ದನ್ನು ತಿಳಿಸಿದರೆ, 'ಹಡಗಿನ ಕೇರಿಗೆ ಹೋದಾನು ಗೌಡ' ಎಂಬುದು ಹೆಂಡತಿ ಗಂಡನಿಗೆ ಮೀನಿನ ಬಾಲಹಾಕಿ ಮೋಸಮಾಡುವುದನ್ನು ತಿಳಿಸುತ್ತದೆ. ಬಂಜೆತನ, ಜಂಪಣ್ಣನ ಸಾವು, ಸತ್ಯುಳ್ಳ ಪಾಂಡವರು, ಹನುಮನು-ಗರುಡನು, ಬಾಂದಿನವರು ಬತ್ತರೆ ಕಾಣಣ್ಣ, ಸೂಳೆಯ ಸಂಗ ಬೇಡಿರಣ್ಣ, ಜವರಾಯ, ಹುಂಜ ಮುಂತಾದ ಗೀತೆಗಳು ಪ್ರಮುಖವಾಗಿವೆ.

ಕನ್ನಡ ಜನಪದ ಮಕ್ಕಳ ಕಥೆಗಳು : ಸಂಗ್ರಹಿಸಿ, ಸಂಪಾದಿಸಿ, ಪ್ರಕಟಣೆಗೆ ಸಿದ್ಧಪಡಿಸಿದ್ದ "ಕನ್ನಡ ಜನಪದ ಮಕ್ಕಳ ಕಥೆಗಳು" ಗ್ರಂಥ 2007 ರಲ್ಲಿ ಪ್ರಕಟವಾಯಿತು. ಇದರಲ್ಲಿ 20 ಕಥೆಗಳಿವೆ. ಈ ಕಥೆಗಳನ್ನು ಸಂಪಾದಕರು ಏಳೆಂಟು ವರ್ಷ ವಯಸ್ಸಾಗಿದ್ದ ಸಂದರ್ಭದಲ್ಲಿ ಕೇಳಿದ್ದವುಗಳು. ಇವುಗಳನ್ನು ಎಂಟು-ಒಂಬತ್ತು ದಶಕಗಳಿಂದ ನೂರಾರು ಮಕ್ಕಳಿಗೆ ಹಾಗು ಅನೇಕ ಮಕ್ಕಳ ಸಮಾವೇಶದಲ್ಲಿ ಹೇಳಿರುವುದಾಗಿ, ಅವರೇ ಹೇಳಿಕೊಂಡಿದ್ದಾರೆ. ಇಲ್ಲಿಯ ಕಥೆಗಳು ಸಚಿತ್ರ ಸಮೇತವಾಗಿ,

ದಪ್ಪ ಅಕ್ಷರಗಳಲ್ಲಿ ಪ್ರಕಟವಾಗಿರುವುದು ಮಕ್ಕಳ ಓದಿಗೆ ಮತ್ತು ಮನನಕ್ಕೆ ತುಂಬಾ ಅನುಕೂಲವಾಗಿವೆ. ಇವುಗಳಲ್ಲಿ ಕಾಗಕ್ಕ-ಗುಬ್ಬಕ್ಕ, ನೊಣ-ಗಿಣಿ ಪಾಯಸ ಮಾಡಿದ್ದು, ದಡ್ಡ ದೋಸೆ ಮಾರಿದ್ದು, ಕೋತಿತಮ್ಮಣ್ಣನ ತಂಗಿಯರು, ಆಚಾರ್ರು ಕುದುರೆ ಕೊಂಡಿದ್ದು ಮುಂತಾದ ಕಥೆಗಳು ಹಾಸ್ಯಭರಿತವಾಗಿ ಆಕರ್ಷಣೀಯವಾಗಿವೆ. ಮಕ್ಕಳು ಸರಾಗವಾಗಿ ಓದಿಕೊಂಡುಹೋಗುವ ಗುಣ ಈ ಕಥೆಗಳಲ್ಲಿದೆ.

ಇವರ ಜಾನಪದಕ್ಕೆ ಸಂಬಂಧಿಸಿದ ಎರಡು ಬಿಡಿ ಲೇಖನಗಳಿವೆ. ಒಂದು ತರೀಕೆರೆಯ ಪಾಳೆಗಾರರನ್ನು ಕುರಿತದ್ದು. ಪಾಳೇಯಗಾರರ ವಂಶಾವಳಿ, ಅವರಲ್ಲಿದ್ದ ಅಂತಃಕಲಹ, ತರೀಕೆರೆಯ ನಿರ್ಮಾಣದ ಬಗ್ಗೆ ಬೆಳಕುಚೆಲ್ಲುವಂತಹದ್ದು. ಎರಡನೆಯದು ಮಲೆನಾಡು ಹಾಗು ಬಯಲು ನಾಡಿನ ಜನಪದ ಸಾಹಿತ್ಯವನ್ನು ತುಲನಾತ್ಮಕವಾಗಿ ಚಿಂತಿಸಿ, ಜಾನಪದ ವಿದ್ವಾಂಸರಿಗೆ ಕೆಲವು ಸಲಹೆಗಳನ್ನು ನೀಡಿರುವ ಲೇಖನವಾಗಿದೆ.

ಕಳಸಾಪುರದ ಹುಡುಗರು : ಇವರ ಕಾದಂಬರಿ "ಕಳಸಾಪುರದ ಹುಡುಗರು" ಕನ್ನಡದ ಮೊದಲ ಮಕ್ಕಳ ಕಾದಂಬರಿ. ಇದು 1952-53ನೇ ಸಾಲಿನಲ್ಲಿ ಮಾಧ್ಯಮಿಕ ತರಗತಿಗಳಿಗೆ ಅವಿಸ್ತರ ಪಠ್ಯವಾಗಿತ್ತು. ಈ ಪುಸ್ತಕ ಒಂಬತ್ತು ಮುದ್ರಣಗಳನ್ನು ಕಂಡಿದೆ. ಇದು ಕನ್ನಡದಲ್ಲಿ ಚಲನಚಿತ್ರವಾಗಿದೆ. ಇವರ ಮೊಮ್ಮಗ ಪ್ರಕೃತಿ ಎನ್. ಬನವಾಸಿ ಈ ಕೃತಿಯನ್ನು ಇತ್ತೀಚೆಗೆ ಇಂಗ್ಲೀಷ್‌ಗೆ ಅನುವಾದ ಮಾಡಿದ್ದಾರೆ. ಮಕ್ಕಳಲ್ಲಿ ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸುವ ಕಾದಂಬರಿ ಇದು.

ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ "ಸರ್ವೋದಯ" ಮತ್ತು ಸಾಮಾಜಿಕ ಸಮಸ್ಯೆಯ "ಮರುಗಿ" ಈ ಎರಡು ಕಾದಂಬರಿಗಳು.

"ಪಚ್ಚೆತೆನೆ" ವಸ್ತು ವೈವಿಧ್ಯತೆಯನ್ನೊಳಗೊಂಡ ಅತ್ಯುತ್ತಮ ಸಣ್ಣಕತೆಗಳ ಸಂಕಲ. "ಭರತಪ್ಪನ ಸೊಂಟಕ್ಕೆ ಗಂಟೆ" ಜಾನಪದ ಆಧಾರಿತ ಪೌರಾಣಿಕ ನಾಟಕ. "ಹೊಸಹಳ್ಳಿ" ಎಂಬುದು ಹಳ್ಳಿಯ ಅಭಿವೃದ್ಧಿಯನ್ನೇ ಮುಖ್ಯ ವಸ್ತುವಾಗುಳ್ಳ ನಾಟಕ. ಇದು ಭಾರತ ಸರ್ಕಾರದಿಂದ ಬಹುಮಾನ ಪಡೆದಿರುವ ಕೃತಿ. ರೇಡಿಯೋ ಪ್ರಸಾರಕ್ಕಾಗಿಯೇ ಬರೆದು, ಪ್ರಸಿದ್ಧವಾದ ಮೂರು ನಾಟಕಗಳನ್ನೊಳಗೊಂಡ ಕೃತಿಯೇ "ಕಲ್ಯಾಣಿ". ನೀತಿಕಥೆಗಳನ್ನು ಹೊಂದಿರುವ, ಮಕ್ಕಳನ್ನು ಆಕರ್ಷಿಸುವಂತಹ ಕೃತಿಯೇ "ಪಂಚತಂತ್ರದ ಕಥೆಗಳು". ಮತಿಘಟ್ಟ ಕೃಷ್ಣಮೂರ್ತಿಯವರನ್ನು ಶಿಷ್ಟ ಸಾಹಿತಿ ಎಂಬುದಕ್ಕಿಂತ ಹೆಚ್ಚಾಗಿ ಜಾನಪದ ಕ್ಷೇತ್ರದಲ್ಲಿಯ ಸಾಧಕ ಎಂದೇ ಗುರುತಿಸುವುದು ಸೂಕ್ತವೆನಿಸುತ್ತದೆ.

ಜನಪದ ಸಾಹಿತ್ಯ ಯಾರಿಗೂ ಬೇಡವಾಗಿದ್ದು, ಉದಾಸೀನದಿಂದ ತಿರಸ್ಕೃತವಾಗಿದ್ದ ಕಾಲದಲ್ಲಿ ಮತಿಘಟ್ಟ ಕೃಷ್ಣಮೂರ್ತಿಯವರು ಕರ್ನಾಟಕದಾದ್ಯಂತ ಸಂಚರಿಸಿ ಅಪಾರ ಜನಪದ ಸಾಹಿತ್ಯ ಸಂಗ್ರಹಿಸಿದ್ದು ಮಹತ್ ಸಾಧನೆಯೇ ಆಗಿದೆ. ಈ ದೃಷ್ಟಿಯಿಂದ ಕರ್ನಾಟಕದ ಜಾನಪದ ಸಂಗ್ರಹಕಾರರಲ್ಲಿ ಮೊದಲನೆ ಸ್ಥಾನ ಇವರಿಗೆ ಸಲ್ಲುತ್ತದೆ. ಒಂದು ಸಂಸ್ಥೆ, ವಿಶ್ವವಿದ್ಯಾನಿಲಯ ಮಾಡುವಷ್ಟು ಕೆಲಸವನ್ನು ಒಬ್ಬರೇ ಮಾಡಿರುವುದು ಕೂಡ ಪ್ರಶಂಸನೀಯವಾದುದಾಗಿದೆ. ಇವರ ಶ್ರದ್ಧೆ, ಶ್ರಮ, ಸಾಧನೆಯೇ ಒಂದು ಸಂಸ್ಥೆ ಇದ್ದ ಹಾಗೆ. ಆದುದರಿಂದ ಕೃಷ್ಣಮೂರ್ತಿಯವರ ಹೆಸರು ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗುವಂತಹದ್ದು.

* * *

ಮತಿಘಟ್ಟ ಕೃಷ್ಣಮೂರ್ತಿಯವರು ಮೈಸೂರು ಸಂಸ್ಥಾನದಲ್ಲಿ ವ್ಯಾಪಕವಾಗಿ ಕ್ಷೇತ್ರಕಾರ್ಯ ನಡೆಸಿ, ಅಪಾರ ಸಂಖ್ಯೆಯಲ್ಲಿ ಅಪರೂಪದ ಜನಪದ ಗೀತೆಗಳನ್ನು ಸಂಗ್ರಹಿಸಿ, ಬೃಹತ್ ಪ್ರಮಾಣದಲ್ಲಿ ಪ್ರಕಟಿಸಿ ಹೆಸರಾದವರು. ಬ್ರಾಹ್ಮಣ ಜನಪದ ಗೀತೆಗಳನ್ನು ಸಂಗ್ರಹಿಸಿದವರಲ್ಲಿ ಮೊದಲಿಗರು. ಜನಪದ ಗೀತೆಗಳನ್ನು ಆಕಾಶವಾಣಿಯಲ್ಲಿ ಸುಗಮ ಸಂಗೀತಗಾರರು ಹಾಡಲು, ಗ್ರಾಮಫೋನು ಧ್ವನಿಮುದ್ರಿಕೆ ತಯಾರಿಸಲು ನೆರವಾಗಿ ಜನಪದ ಗೀತೆಗಳು ಪ್ರಸಾರವಾಗಲು ಗಮನಕೊಟ್ಟರು. ಜನಪದ ತ್ರಿಪದಿ ಲಕ್ಷಣದ ಬಗೆಗೆ ವ್ಯಾಖ್ಯಾನಿಸಿದರು. ಜನಪದ ಗೀತ ಸಂಗ್ರಹ ಪ್ರಕಟಣೆ ಪ್ರಸಾರವನ್ನು ಜೀವನದ ಪ್ರಮುಖ ಧ್ಯೇಯವನ್ನಾಗಿ ಇಟ್ಟುಕೊಂಡು ದುಡಿದರು. ಕ್ಷೇತ್ರಕಾರ್ಯದ ಸ್ವಾನುಭವದ ಗಣಿಯಾಗಿದ್ದರು.

ಮತಿಘಟ್ಟ ಕೃಷ್ಣಮೂರ್ತಿಯವರು ಜನಪದ ಗೀತ ಸಂಗ್ರಹದ ಜೊತೆಗೆ, ಸೃಜನಶೀಲ ಸಾಹಿತ್ಯ, ಪ್ರತಿಕೋದ್ಯಮದಲ್ಲೂ ಸೇವೆ ಸಲ್ಲಿಸಿದರು. ಸ್ವಾತಂತ್ರ್ಯ ಹೋರಾಟಗಾರರೂ ಮಹತ್ಮಗಾಂಧೀಜಿಯವರ ಅನುಯಾಯಿಯೂ ಆಗಿದ್ದರು. ಅವರ ಕಿರುಪರಿಚಯ ಪ್ರಸ್ತುತ ಗ್ರಂಥದ ಆಶಯ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು,
ಬೆಂಗಳೂರು